



ಚುಕ ಗೆಕ್ಕರ್

ಅರ್ಕಾದಿ ಗೈದರ್


ಚುಕ್ಕ
ಗೆಕ್ಕರ್
ಅರ್ಕಾದಿ ಗೈದರ್

ಚುಕ್ಕ ಗೆಕ್ಕರು

ಅರ್ಕಾಡಿ ಗೈದರ್

ಅನುವಾದ: **ಡಾ. ಕಮಲಾಕ್ಷ ಕೆ**

ಪ್ರಕಾಶನದ ಪರವಾಗಿ

ಭಾರತದಲ್ಲಿ ಒಂದೊಮ್ಮೆ ವ್ಯಾಪಕ ಪ್ರಸಾರವಿದ್ದ ಗತಕಾಲದ ಸೋವಿಯಟ್ ಯೂನಿಯನ್‌ನ ಪುಸ್ತಕಗಳ ಬಗೆಗಿನ ಸವಿನೆನಪುಗಳು ನಮಗೆ ಇನ್ನೂ ಮಾಸಿಹೋಗಿಲ್ಲ. ಸಮೃದ್ಧ ಕಥೆಗಳ, ಬೆಟ್ಟುಕಚ್ಚಿಸುವಂಥ ವೈಜ್ಞಾನಿಕ ಸತ್ಯಗಳನ್ನು ಒಳಗೊಂಡಿದ್ದ ಮತ್ತು ಮೈಮರೆಸುವ ವಿವರಣೆಯನ್ನೊಳಗೊಂಡ ಆ ಪುಸ್ತಕಗಳು ಓದುಗರ ಹೃದಯವನ್ನು ಗೆದ್ದಿದ್ದುವು. ಅವು ನಮ್ಮ ಮೇಲೆ ಅಳಿಸಲಾಗದ ಮುದ್ರೆಯನ್ನೊತ್ತಿದ್ದು ಮಾತ್ರವಲ್ಲ ಎಂದಿಗೂ ಮರೆಯಲಾಗದ ಓದಿನ ಸುಖವನ್ನೂ ನೀಡಿವೆ. ಮಲೆಯಾಳಿ ವರ್ಗಕ್ಕಂತೂ ಆ ಅನುಭವ ಸದಾ ಹಸಿರು.

ಸೋವಿಯಟ್ ಯೂನಿಯನ್ ಖಿಲವಾಗಿ, ಆ ಆಕರ್ಷಕ ಕಥೆಪುಸ್ತಕಗಳು ಮರೆಗೆ ಸಂದುವು, ಅವೆಲ್ಲ ಗತನೆನಪುಗಳ ಭಾವಕೋಶ ಸೇರಿದುವು. ಆದರೇನು? ಓದುಗರು ಅವಿಶ್ರಾಂತವಾಗಿ ಆ ಅನನುಕರಣೀಯ ಪುಸ್ತಕಗಳು ಮತ್ತೆ ಬಂದಾವೆಂಬ ನಿರೀಕ್ಷೆ ಇರಿಸಿಕೊಂಡಿದ್ದಾರೆ. ಆ ಕಾರಣಕ್ಕಾಗಿಯೇ, ನಾವು ಇನ್‌ಸೈಟ್ ಪಬ್ಲಿಕಾ ಹಿಂದಿನ ಪುಸ್ತಕಗಳ ಮಾದರಿಯಲ್ಲಿ ಕೆಲವು ಪುಸ್ತಕಗಳನ್ನಾಯ್ದು ಪ್ರಕಟಿಸಿದ್ದೇವೆ. ಈ ಯೋಜನೆ ಸಾಕಾರಗೊಳ್ಳುವುದಕ್ಕೆ ಓದುಗರ ಮನಃಪೂರ್ವಕ ಬೆಂಬಲವೇ ಕಾರಣ. ಅದನ್ನು ನಾವು ಸಂತಸ ಮತ್ತು ಕೃತಜ್ಞತೆಯಿಂದ ಉಲ್ಲೇಖಿಸಬಯಸುತ್ತೇವೆ.

ನಮ್ಮ ಯೋಜನೆಯನ್ನು ಕಾರ್ಯಗತಗೊಳಿಸುವ ವೇಳೆಯಲ್ಲಿ ಹಿರಿಯ ರಾಷ್ಟ್ರವೊಂದರ ಅಪೂರ್ವ ಸಾಹಿತ್ತಿಕ ಯೋಜನೆಯ ಆಳ – ಅಗಲಗಳನ್ನು ಜಾಲಾಡಿದ್ದೇವೆ. ಶ್ರೇಷ್ಠವಾದ ಆ ಸೋವಿಯಟ್ ಕಥೆಗಳು ಭಾಷಾಂತರಗಳ ಮೂಲಕ ಅನೇಕ ದೇಶಗಳಲ್ಲಿ ದಾಂಗುಡಿಯಿಟ್ಟು ಪಸರಿಸಿವೆ. ಈ ಪುಸ್ತಕಗಳು ವಾಣಿಜ್ಯೋತ್ಪನ್ನಗಳಾಗಿಯಲ್ಲ, ಬದಲಿಗೆ ಸಂಸ್ಕೃತಿ ಉತ್ಪನ್ನಗಳಾಗಿ ಸಾರ್ವತ್ರಿಕ ಆದರ ಗಳಿಸಿವೆ. ಇನ್‌ಸೈಟ್ ಪಬ್ಲಿಕಾ ಸಂಸ್ಥೆಗೆ ದೊರೆತ ಅದ್ಭುತ ಬೆಂಬಲವು ಸೋವಿಯಟ್ ಕೃತಿಗಳನ್ನು ಭಾರತೀಯ ಭಾಷೆಗಳಲ್ಲಿ ಮತ್ತೆ ಮುದ್ರಿಸಿ ಪ್ರಕಾಶನಗೊಳಿಸಲು ಹಾಗೂ ಧೈರ್ಯದಿಂದ ಮುಂದುವರಿಯಲು ಚಾಲಕಶಕ್ತಿಯಾಯಿತು.

ಈ ಪುಸ್ತಕಗಳ ಬಿಂಬಪ್ರತಿ (Scanned Copy) ಗಳನ್ನು ಹೊಂದಿ ಓದುಗರು ಇನ್ನು ಅತೃಪ್ತರಾಗಬೇಕಾಗಿಲ್ಲ. ಮೂಲಪುಸ್ತಕಗಳು ಅದೇ ತಾಜಾತನ ಮತ್ತು ನಸುಬಿಸುಪಿನೊಂದಿಗೆ ನಿಮ್ಮ ಕೈಗೆಟಕುವಂತೆ ಇನ್‌ಸೈಟ್ ಪಬ್ಲಿಕಾ ಯತ್ನಿಸುವುದು.

ಈ ಕಥೆಗಳನ್ನು ಕನ್ನಡಕ್ಕೆ ಬಾಷಾಂತರಮಾಡಿಕೊಟ್ಟ ಕಾಸರಗೋಡಿನ ಡಾ. ಕಮಲಾಕ್ಷ ಕೆ. ಇವರಿಗೆ ಇನ್‌ಸೈಟ್ ಪಬ್ಲಿಕಾ ಅಭಾರಿಯಾಗಿದೆ.

ಸುಮೇಶ್ ಇನ್‌ಸೈಟ್



ನೀಲಮಲೆಗೆ ಹತ್ತಿರವಿದ್ದ ಕಾಡೊಂದರಲ್ಲಿ ಹಿಂದೊಮ್ಮೆ ಒಬ್ಬಾತ ನೌಕರಿಮಾಡುತ್ತಿದ್ದ. ಆತ ತುಂಬ ಶ್ರಮವಹಿಸಿ ದುಡಿಯುತ್ತಿದ್ದರೂ ಅವನ ಕೆಲಸಗಳು ಎಂದೂ ಮುಗಿಯುತ್ತಿರಲಿಲ್ಲ. ಹಾಗಾಗಿ ರಜೆಯಲ್ಲಿ ಊರಿಗೆ ಹೋಗಲು ಅವನಿಗೆ ಸಮಯ ಸಿಗುತ್ತಿರಲಿಲ್ಲ.

ಕೊನೆಗೆ ಹಿಮಬೀಳುವ ಚಳಿಗಾಲ ಬಂದಾಗ ಅವನಿಗೆ ತೀವ್ರವಾದ ಒಬ್ಬಂಟಿತನದ ಅನುಭವವಾಯಿತು. ಮಕ್ಕಳನು ಕರೆದುಕೊಂಡು ತನನು ಕಾಣಲು ಬರಲು ಹೆಂಡತಿಗೆ ಪತ್ರ ಬರೆದ.

ಅವನಿಗೆ ಇಬ್ಬರು ಮಕ್ಕಳಿದ್ದರು. ಚುಕ್ಕ ಮತ್ತು ಗೆಕ್ಕ. ಅವರು ತಾಯಿಯೊಂದಿಗೆ ಬಹಳ ದೂರದ ಒಂದು ದೊಡ್ಡ ನಗರದಲ್ಲಿ ವಾಸವಾಗಿದ್ದರು. ಅದಕ್ಕಿಂತಲೂ ಒಳ್ಳೆಯ ನಗರ ಭೂಮಂಡಲದಲ್ಲೇ ಇಲ್ಲ.



ಹಗಲು ರಾತ್ರಿಗಳಲ್ಲಿ ಕೆಂಬಣ್ಣದ ನಕ್ಷತ್ರಗಳು ನಗರದ ಗೋಪುರದ ಮೇಲೆ ತಳತಳನೆ ಬೆಳಗುತ್ತಿದ್ದುವು. ಸಂಶಯವೇ ಇಲ್ಲ. ಆ ನಗರದ ಹೆಸರು ಮಾಸ್ಕೋ ಎಂದು.

***

ಅಂಚೆಪೇದೆ ಪತ್ರವನು ಹಿಡಿದುಕೊಂಡು ಮಾಳಿಗೆ ಮೆಟ್ಟಲೇರಿ ಬರುತ್ತಿದ್ದಾಗ ಚುಕ್ಕ ಗೆಕ್ಕರು ಕುಸ್ತಿಹಿಡಿಯುವುದರಲ್ಲಿ ಮುಳುಗಿದ್ದರು. ಮಾತ್ರವಲ್ಲ ಅದು ಹಠಬಿದ್ದ ಸ್ಪರ್ಧೆಯಾಗಿತ್ತು ಕೂಡ. ಅವರು ಕುಸ್ತಿ ಹಿಡಿದದ್ದು ಯಾಕೆ ಎಂದು ಅವರಿಗೆ ನೆನಪಾಗುತ್ತಿಲ್ಲ. ಗೆಕ್ಕನ ಬೆಂಕಿಪೊಟ್ಟಣದ ಗೂಡನು ಚುಕ್ಕ ಹಾಳುಗೆಡಿಸಿಕೊಂಡ ಅಂತ ಇರಬೇಕು. ಅಥವಾ ಚುಕ್ಕನ ಖಾಲಿ ಪಾಲಿಶ್ ಡಬ್ಬವನು ಗೆಕ್ಕ ಜಾರಿಸಿಕೊಂಡು ಹೋದ ಅಂತಲೋ ಎಂಬುದು ಖಾತ್ರಿಯಿಲ್ಲ.

ಅವರು ಪರಸ್ಪರ ಒಂದೊಂದು ಗುದ್ದು ಬದಲಾಯಿಸಿಕೊಂಡು ಮುಂದಿನದಕ್ಕೆ ಸಿದ್ಧವಾಗುವ ಹೊತ್ತಲ್ಲಿ ಗಂಟೆಯ ಸದ್ದು. ಅವರು ಗಾಬರಿಗೊಂಡು ಪರಸ್ಪರ ಮುಖ ನೋಡಿದರು. ಅಮ್ಮನಿರಬೇಕೆಂದು ಭಾವಿಸಿದ್ದರು. ಅವರ ಅಮ್ಮ ಇತರ ಅಮ್ಮಂದಿರಂತೆ ಅಲ್ಲವಾಗಿತ್ತು. ಕುಸ್ತಿ ಮಾಡಿದರೆ ಆಕೆ ಅವರನು ಬೈಯುವುದಾಗಲಿ ದನಿ ಎತ್ತರಿಸಿ ಮಾತನಾಡುವುಗಲಿ ಮಾಡುತ್ತಿರಲಿಲ್ಲ. ತಪ್ಪಿತಸ್ಥರನು ಪೂರ್ತಿ ಒಂದು ಗಂಟೆ ಅಥವಾ ಎರಡು ಗಂಟೆಗಳ ಕಾಲ ಇಬ್ಬರೂ ಒಂದಾಗಿ ಆಟವಾಡಲು ಬಿಡದೆ ಬೇರೆ ಬೇರೆ ಕೋಣೆಗಳಲ್ಲಿ ಹಾಕಿಬಿಡುತ್ತಾಳೆ, ಅಷ್ಟೆ.

ಅರುವತ್ತು ಮಿನಿಟುಗಳು ಟಿಕ್ ಟಿಕ್ ಎಂದು ಬಡಿದುಕೊಳ್ಳುತ್ತ ಸಾಗಿದರೇನೇ ಒಂದು ಗಂಟೆಯಾದೀತು. ಎರಡು ಗಂಟೆ ಕಳೆಯಲು ಅದಕ್ಕಿಂತ ಲೂ ಹೆಚ್ಚು ಸಮಯ ಬೇಕು.

ಆದುದರಿಂದ ಅವರು ಬೇಗಬೇಗ ಕಣ್ಣೀರು ಒರೆಸಿಕೊಳ್ಳುತ್ತ ಬಾಗಿಲು ತ ಗೆಯಲು ಓಡಿದರು.



ಆದರೆ ಬಂದುದು ಅಮ್ಮನಲ್ಲ. ಪತ್ರವನು ತೆಗೆದುಕೊಂಡು ಬಂದ ಅಂಚೆಅಣ್ಣ.

"ಅಪ್ಪನ ಪತ್ರ!" ಅವರು ಗಟ್ಟಿಯಾಗಿ ಹೇಳಿದರು. "ಹುರ್ರೇ! ಅಪ್ಪನ ಪತ್ರ! ಅಪ್ಪ ಕೂಡಲೇ ಬರುವವರಿರಬೇಕು!"

ಸಂತಸದಿಂದ ಅವರು ಸೋಫಾದಲ್ಲಿ ನೆಗೆದಾಡುವುದಕ್ಕೂ ತಲೆಯೂರಿ ಮಗುಚುವುದಕ್ಕೂ ತೊಡಗಿದರು. ಪ್ರಪಂಚದಲ್ಲೆಲ್ಲ ಮಾಸ್ಕೋ ಅತ್ಯಂತ ಒಳ್ಳೆಯ ನಗರವಾಗಿದ್ದರೂ ಅಪ್ಪ ಒಂದು ವರ್ಷ ಪೂರ್ತಿ ಹತ್ತಿರವಿಲ್ಲದಿದ್ದರೆ ಮಾಸ್ಕೋ ನಗರ ಕೂಡ ಬೇಜಾರಿನ ಊರು ಎನಿಸಬಹುದು. ಅವರ ಉದ್ವೇಗ ಆಹ್ಲಾದಗಳ ನಡುವೆ ಅಮ್ಮ ಬಂದುದು ಅವರಿಗೆ ಗೊತ್ತಾಗಲಿಲ್ಲ.

ತನ ಇಬ್ಬರು ಜಾಣ ಮಕ್ಕಳೂ ಅಂಗಾತ ಮಲಗಿಕೊಂಡು ಬೊಬ್ಬಿರಿಯುತ್ತ ಗೋಡೆಗೆ ತುಳಿಯುತ್ತಿರುವುದನು ನೋಡಿ ಆಕೆಗೆ ಅಚ್ಚರಿಯಾಯಿತು. ಮಕ್ಕಳ ಒದೆಯ ರಭಸಕ್ಕೆ ಸೋಫಾದ ಮೇಲೆ ತೂಗುಹಾಕಿದ್ದ ಚಿತ್ರಗಳು ಕಳಚಿಕೊಂಡು ಗಡಿಯಾರದ ಸ್ಪ್ರಿಂಗ್ ಹೂಂಕಾರ ಮಾಡತೊಡಗಿತು. ಆದರೆ, ಅವರ ಆಹ್ಲಾದ

[illegible]

[illegible]

[illegible]

[illegible] ಅಮ್ಮ ಅವರನು ಬಯ್ಯಲಿಲ್ಲ. ಬದಲಾಗಿ, ಅವಳು ಮಕ್ಕಳನು ಸೋಫಾದಿಂದ ಕೆಳಗಿಳಿಸಿದಳು. ಫರ್‌ಕೋಟನು ಕೂಡಲೇ ಬಿಚ್ಚಿಟ್ಟು ಪತ್ರ ಓದತೊಡಗಿದಳು. ಕೂದಲಿಗೆ ಅಂಟಿದ್ದ ಮಂಜಿನ ಚೂರುಗಳನು ಕೊಡವಿ ಹಾಕಲು ಕೂಡ ಅವಳು ಮನಮಾಡಲಿಲ್ಲ. ಅವು ಈ ಮಧ್ಯೆ ಕರಗಿಹೋಗಿದ್ದವು. ಅವಳ ಕಪ್ಪು ಹುಬ್ಬುಗಳ ಮೇಲೆ ಅವು ಮುತ್ತುಗಳಂತೆ ಹೊಳೆದುವು.

***

ಪತ್ರಗಳು ಸಂತೋಷದಾಯಕವೋ ದುಃಖಪ್ರದವೋ ಆಗಿರಬಹುದೆಂಬ ವಿಚಾರ ಎಲ್ಲರಿಗೂ ತಿಳಿದುದೇ ಅಲ್ಲವೆ? ಆದುದರಿಂದಲೇ ಅಮ್ಮ ಪತ್ರವನು ಓದುತ್ತಿದ್ದಾಗ ಚುಕ್ಕ ಗೆಕ್ಕರು ಆಕೆಯ ಮುಖವನು ಗಮನವಿಟ್ಟು ನೋಡುತ್ತಾ ಕುಳಿತಿದ್ದರು.

ಮೊದಲು ಆಕೆ ಹಣೆ ಸುಕ್ಕುಗಟ್ಟಿಸಿದಳು. ಅವರೂ ಹಾಗೆಯೇ ಮಾಡಿದರು. ಬಳಿಕ ಅಮ್ಮ ಮುಗುಳಕ್ಕಳು. ಅಂದರೆ ಪತ್ರ ಸಂತೋಷದಾಯಕವಾದುದ್ದು ಎಂದೇ ಅರ್ಥ.

"ನಿಮ್ಮ ಅಪ್ಪ ಬರುತ್ತಿಲ್ಲ" ಪತ್ರವನು ಬದಿಗಿಡುತ್ತ ಅಮ್ಮ ಹೇಳಿದಳು. "ಅವರಿಗೆ ಒಂದಷ್ಟು ಕೆಲಸಗಳಿರುವುದರಿಂದ ಇಲ್ಲಿಗೆ ಬರಲಾಗುವುದಿಲ್ಲವಂತೆ."

ಚೆಕ್ಕ ಗೆಕ್ಕರು ದಿಙ್ಮೂಢರಾಗಿ ಪರಸ್ಪರ ಮುಖ ನೋಡಿದರು. ಹಾಗಿದ್ದರೆ ಆ ಪತ್ರ ಅತ್ಯಂತ ದುಃಖದಾಯಕವಾದುದು. ಎಂದ ಹಾಗಾಯಿತು. ಒಂದು ನಿಮಿಷದೊಳಗೆ ಅವರು ತುಟಿಕಚ್ಚಲೂ ಮೂಗುಸೀಟಲೂ ಅಮ್ಮನ ಮುಖವನು ಸಿಟ್ಟಿನಿಂದ ನೋಡಲೂ ಪ್ರಾರಂಭಿಸಿದರು. ಆಕೆಯಾದರೋ ಯಾವ ಕಾರಣಕ್ಕೋ ಮುಗುಳಗುತ್ತಿದ್ದಳು.

"ಅವರು ಬರುವುದಿಲ್ಲ" ಆಕೆಯೆಂದಳು. "ಆದರೆ ನಾವೇ ಆಕಡೆ ಹೋಗಿ ಅವರನು ಕಾಣಬೇಕೆಂದು ಹೇಳುತ್ತಿದ್ದಾರೆ."

ಅದನು ಕೇಳಿದ್ದೇ ತಡ ಚುಕ್ಕ ಗೆಕ್ಕರು ಸೋಫಾದಿಂದ ಹಾರಿ ಇಳಿದರು.

“ಯಾವ ತರದ ಮನುಷ್ಯನಪ್ಪ ಇವರು?” ಅಮ್ಮ ನಿಟ್ಟುಸಿರಿಟ್ಟಳು. ಬಂದು ಕಾಣಬೇಕು ಅಂತ ಹೇಳಲು ಸುಲಭ. ಯಾರಾದರೂ ಇದನು ಕೇಳಿದರೆ ಭಾವಿಸಬೇಕು – ಒಂದು ಟ್ರೈನಲ್ಲಿ ಹತ್ತಿ ಆಚೆ ಹೋದರಾಯಿತು ಎಂದು.

“ಅದೇ ! ಬರಬೇಕು ಎಂದು ಅಪ್ಪ ಹೇಳಿದರೆ ನಾವು ಕೂಡಲೇ ಹೊರಟುಬಿಡಬೇಕು” ಚುಕ್ಕ ಮಧ್ಯೆ ಪ್ರವೇಶಿಸಿ ಹೇಳಿದ.

“ನೀನೊಬ್ಬ ಮುಠ್ಠಾಳ” ಅಮ್ಮ ಹೇಳಿದಳು. “ಅಲ್ಲಿಗೆ ತಲುಪಲು ಸಾವಿರವಲ್ಲ, ಇನೂ ಒಂದುಸಾವಿರ ಕಿಲೋಮೀಟರ್ ದೂರವನು ರೈಲಲ್ಲಿ ಸಂಚರಿಸಬೇಕು. ಅದಾದಮೇಲೆ ತೈಗಾದ ಮೂಲಕ ಹಿಮಗಾಡಿ ಓಡಿಸಿ ಹೋಗಬೇಕು. ಆ ತೈಗಾದಲ್ಲಾದರೋ ಸೀಳುನಾಯಿಗಳದಾಗಲಿ ಕರಡಿಗಳದಾಗಲಿ ಬಾಯಿಗೆ ಬೀಳುವುದು ಶತಸ್ಸಿದ್ಧ. ಆದೀತು! ಎಂಥ ದೀಪಾವಳಿ ಹಬ್ಬ! ನೀವೇ ಒಮ್ಮೆ ಯೋಚಿಸಿ ನೋಡಿ.”

ಆದರೆ ಚುಕ್ಕಗೆಕ್ಕರು ಅದರ ಕುರಿತು ಒಂದು ನಿಮಿಷ ಕೂಡ ಯೋಚಿಸಲು ಸಿದ್ಧರಿರಲಿಲ್ಲ. ಸಾವಿರವಲ್ಲ ಒಂದು ಲಕ್ಷ ಕಿಲೋಮೀಟರ್ ಪ್ರಯಾಣಿಸಲು ತಾವು ಸಿದ್ಧರೆಂದು ಅವರು ಹೇಳಿದರು. ಅವರಿಗೆ ಯಾವುದರದೂ ಹೆದರಿಕೆಯಿಲ್ಲ. ಅವರು ಧೈರ್ಯವಂತರು. ಎಲ್ಲಿಂದಲೋ ಬಂದು ಸೇರಿಕೊಂಡ ಒಂದು ಹಡೆನಾಯಿಯನು ಅವರು ಅಂಗಳದಿಂದ ಓಡಿಸಿದ್ದು ನೆನೆಯಲ್ಲವೇ?

ಅವರು ತಮ್ಮಲ್ಲೇ ಆಡಿಕೊಳ್ಳುತ್ತ ಕೈಬೀಸಿಕೊಂಡು ಕಾಲೆತ್ತಿ ನೆಲಕ್ಕೆ ತುಳಿಯುತ್ತ ಅಲ್ಲೆಲ್ಲ ಕುಣಿದು ಕುಪ್ಪಳಿಸಿ ನಡೆದರು. ಅದನೆಲ್ಲಾ ಗಮನಿಸಿಯೂ ಅಮ್ಮ ಸುಮ್ಮನೆ ಕುಳಿತಳು ಅಷ್ಟೆ. ಫಕ್ಕನೆ ಆಕೆ ಜೋರಾಗಿ ನಗುತ್ತ ಮಕ್ಕಳನು ಬಾಚಿ ತಬ್ಬಿಕೊಂಡು ಅವರನು ಸುತ್ತಲೂ ತಿರುಗಿಸಿ ಕೊನೆಗೆ ಸೋಫಾಕ್ಕೆ ಹಾಕಿದಳು.



ನಾವು ಪರಸ್ಪರ ಹೇಳಿಕೊಳ್ಳುವುದಾದರೆ ಆಕೆ ನಿಜವಾಗಿಯೂ ಅಂಥದೊಂದು ಪತ್ರವನು ಬಹಳ ದಿನಗಳಿಂದ ನಿರೀಕ್ಷಿಸಿಕೊಂಡಿದ್ದಳು. ತಮಾಷೆ ಇಷ್ಟವಾದುದರಿಂದ ಆಕೆ ಚುಕ್ಕ ಗೆಕ್ಕರ ಜತೆ ಒಂದಿಷ್ಟು ಚೆಲ್ಲಾಟವಾಡಿದ್ದಳು ಅಷ್ಟೆ.

ಪ್ರಯಾಣಕ್ಕೆ ಸಿದ್ಧವಾಗಲು ಅಮ್ಮನಿಗೆ ಒಂದುವಾರ ಬೇಕಾಯಿತು. ಆ ಸಮಯವನು ಚುಕ್ಕ ಗೆಕ್ಕರು ಹಾಳುಗೆಡವಲಿಲ್ಲ.

ಒಂದು ಚಾಕುವಿನಿಂದ ಚುಕ್ಕ ಒಂದು ಕಠಾರಿ ಮಾಡಿದ. ಗೆಕ್ಕ ನಯವಾದ ಒಂದು ದೊಣ್ಣೆಯನು ಕಂಡುಹಿಡಿದು ಅದರ ತುದಿಗೆ ಒಂದು ಮೊಳೆ ಹೊಡೆದ. ಆಗ ಅದು ಒಂದು ಬಲವಾದ ಕುಂತದಂತಾಯಿತು. ಅವನು ಅದನು ಒಂದು ಕರಡಿಯ ಎದೆಗೆ ಇರಿದರೆ ಕರಡಿ ಸತ್ತುಬೀಳುವುದು ನಿಸ್ಸಂದೇಹ. ಯಾರಾದರೂ ಆ ಮೊದಲೇ ಅದರ ಚರ್ಮವನು ಇರಿದು ಹರಿದಿರಬೇಕು ಅಷ್ಟೆ!



ಕೊನಗೆ ಎಲ್ಲ ಸಿದ್ಧವಾಯಿತು. ಸಾಮಾನುಗಳನೆಲ್ಲಾ ಕಟ್ಟಿ ಸಿದ್ಧಮಾಡಿದರು. ಬಾಗಿಲಿಗೆ ಜೋಡುಬೀಗ ಹಾಕಿದರು. ಇಲಿ ಬಾರದಿರಲಿ ಎಂದು ಕಪಾಟಿನಿಂದ ರೊಟ್ಟಿಯ ತುಣುಕುಗಳನೂ ಗೋಧಿಹುಡಿಯ ಪುಡಿಯನೂ ಒರೆಸಿ ತೆಗೆದರು. ಆಮೇಲೆ, ಮರುದಿನ ಹೊರಡುವ ರೈಲಿಗೆ ಟಿಕೇಟು ಖರೀದಿಸುವುದಕ್ಕಾಗಿ ಅಮ್ಮ ರೈಲು ನಿಲ್ದಾಣಕ್ಕೆ ಹೋದಳು.

ಅಮ್ಮ ಹೊರಗೆ ಹೋದ ಸಂದರ್ಭದಲ್ಲಿ ಚುಕ್ಕ ಗೆಕ್ಕರು ಜಗಳವಾಡಿದರು.

ಅಯ್ಯೋ! ಆ ಜಗಳ ಮುಂದೆ ಎಂಥ ತ್ರಾಸ ಕೊಡುತ್ತದೆ ಎಂಬ ಅರಿವಿದ್ದಿದ್ದರೆ ಅವರು ಖಂಡಿತ ಅಂದು ಜಗಳ ಮಾಡುತ್ತಿರಲಿಲ್ಲ.

ಇಬ್ಬರಲ್ಲಿ ಭಾವುಕನಾದ ಚುಕ್ಕನಿಗೆ ತವರದ ಒಂದು ಅಗಲವಾದ ಡಬ್ಬಿಪೆಟ್ಟಿಗೆಯಿತ್ತು. ಅವನು ಅದರಲ್ಲಿ ಚಾಹುಡಿ ಪೊಟ್ಟಣಗಳಲ್ಲಿರುತ್ತಿದ್ದ ಬೇಗಡೆ ಕಾಗದಗಳನೂ ಮಿಠಾಯಿಗಳನು ಸುತ್ತಿಟ್ಟಿರುತ್ತಿದ್ದ ಕಾಗದಗಳನೂ ಜೋಪಾನವಿಟ್ಟಿದ್ದ. ಅಲ್ಲದೆ ಬಾಣಗಳನು ತಯಾರಿಸುವುದಕ್ಕಾಗಿ ಕರಿಕೋಗಿಲೆಯ ಕೆಲವು ಗರಿಗಳೂ ಚೀನೀಯರ ಕಣ್ಕಟ್ಟು ವಿದ್ಯೆ ತೋರಿಸುವುದಕ್ಕೆ ಅಗತ್ಯವಾದ ಕುದುರೆರೋಮಗಳೂ ಅಷ್ಟೇ ಮುಖ್ಯವಾಗಿದ್ದ ಇನೂ ಕೆಲವು ವಸ್ತುಗಳೂ ಅದರಲ್ಲಿದ್ದುವು.

ಗೆಕ್ಕನಿಗೆ ಅಂಥಹ ಒಂದು ಪೆಟ್ಟಿಗೆಯೇ ಇರಲಿಲ್ಲ. ಒಟ್ಟಿನಲ್ಲಿ ಗೆಕ್ಕನದು ಅದು ಇದು ಎಂದು ಯೋಚಿಸುತ್ತ ಇರುವ ಸ್ವಭಾವವಾಗಿತ್ತು. ಆದರೆ ಅವನಿಗೆ ಸೊಗಸಾಗಿ ಹಾಡಲು ಬರುತ್ತಿತ್ತು.

ಚುಕ್ಕ ಅಡುಗೆ ಮನೆಯಿಂದ ಬೆಲೆಬಾಳುವ ತನ ಪೆಟ್ಟಿಗೆಯೊಳಗಿನ ವಸ್ತುಗಳನು ಆಯ್ದು ಇಡುತ್ತಿದ್ದಾಗ ಗೆಕ್ಕ ಹತ್ತಿರದ ಕೋಣೆಯಲ್ಲಿ ಕುಳಿತು ಹಾಡುತ್ತಿದ್ದ. ಅಂಚೆಪೇದೆ ಬಂದು ತಾಯಿಗೆ ಬಂದಿದ್ದ ಒಂದು ತಂತಿಸಂದೇಶವನು ಚುಕ್ಕನ ಕೈಗೆ ಕೊಟ್ಟದ್ದು ಆಗಲೇ.

ಆ ತಂತಿ ಸಂದೇಶದ ಕಾಗದವನು ತನ ಪೆಟ್ಟಿಗೆಯೊಳಗಿರಿಸಿದ ಚುಕ್ಕ, ಗೆಕ್ಕ ಹಾಡು ನಿಲ್ಲಿಸಿದ್ದರ ಕಾರಣ ತಿಳಿಯಲು ಅತ್ತ ತೆರಳಿದ. "ರಾ! ರಾ! ಹುರಾ!" ಗೆಕ್ಕ ಬೊಬ್ಬಿಡುತ್ತಾ ಕಿರಿಚುತ್ತಿದ್ದ. "ಹೇ! ಬೇ! ಟುರುಂಬೇ!"

ಚುಕ್ಕ ಕುತೂಹಲದಿಂದ ಬಾಗಿಲು ತೆರೆದು ನೋಡಿದ. ಆ ದೃಶ್ಯ ನೋಡಿ ಅವನ ಕೈಗಳು ಕ್ರೋಧದಿಂದ ನಡುಗತೊಡಗಿದುವು.

ಕೋಣೆಯ ಮಧ್ಯದಲ್ಲಿ ಒಂದು ಕುರ್ಚಿಯಿತ್ತು. ಅದರ ಹಿಂಭಾಗದಲ್ಲಿ ನೇತಾಡುತ್ತಿದ್ದ ಒಂದು ಪತ್ರವು ಕುಂತದ ಮೊನೆಯಿಂದ ಸರ್ವತ್ರ ಚುಚ್ಚಲ್ಪಟ್ಟು ಹರಿದು ಹೋಗಿತ್ತು. ಅಷ್ಟು ಮಾತ್ರವಾಗಿದ್ದರೆ ಪರವಾಗಿರಲಿಲ್ಲ. ಆದರೆ, ಆ ಭಯಂಕರನಾದ ಗೆಕ್ಕನಿದ್ದಾನಲ್ಲ! ಅಮ್ಮನ ಬೂಟುಗಳನು ಖರೀದಿಸಿ ತಂದಿದ್ದ, ಹಳದಿ ಬಣ್ಣದ ಕಾರ್ಡ್‌ಬೋರ್ಡ್‌ನ ಪೆಟ್ಟಿಗೆಯನು ಒಂದು ಕರಡಿಯೆಂದು ಸಂಕಲ್ಪಿಸಿಕೊಂಡು ಅದನು ಕುಂತದಿಂದ ಸಕಲ ಬಲಪ್ರಯೋಗಿಸಿ ಇರಿಯುತ್ತಿದ್ದ. ಚುಕ್ಕನು ಆ ಪೆಟ್ಟಿಗೆಯೊಳಗೆ ಡಬ್ಬಿತಗಡಿನಿಂದ ಮಾಡಿದ ಒಂದು ಸೀಟಿ, ನವೆಂಬರ್ ಏಳರ ವರ್ಣವಿನ್ಯಾಸದಿಂದ ಕೂಡಿದ ಮೂರು ಬ್ಯಾಡ್ಜುಗಳು, ಸ್ವಲ್ಪ ಹಣ : ಎಲ್ಲಾ ಸೇರಿದರೆ ನಲುವತ್ತಾರು ಕೂಪೆಕ್ – ಇವಿಷ್ಟನು ಜೋಪಾನವಿರಿಸಿದ್ದ. ಗೆಕ್ಕನ ಹಾಗೆ ಸಿಕ್ಕಾಪಟ್ಟೆ ದುಂದುಗಾರಿಕೆ ಮಾಡದೆ ತ 'ಮ್ಮ ದೀರ್ಘಪ್ರಯಾಣಕ್ಕಾಗಿ ಅವನು ಮೀಸಲಾಗಿರಿಸಿದ್ದ ಹಣವಾಗಿತ್ತು, ಅದು.

ಇರಿತದಿಂದ ಛಿದ್ರವಾದ ಪೆಟ್ಟಿಗೆಯನು ಚುಕ್ಕ ಕಂಡವನೇ ಗೆಕ್ಕನ ಕೈಯಿಂದ ಆ ಕುಂತವನು ಸೆಳೆದುಕೊಂಡು ಮೊಣಕಾಲಲ್ಲಿ ಒತ್ತಿ ಎರಡಾಗಿ ತುಂಡರಿಸಿದ. ತುಂಡುಗಳನು ನೆಲಕ್ಕೆ ರಭಸದಿಂದ ಬಿಸಾಡಿದ.

ಆದರೆ, ಗೆಕ್ಕ ಹದ್ದೊಂದರಂತೆ ಚುಕ್ಕನ ನೇರಕ್ಕೆ ಹಾರಿ ಬಂದು ಅವನ ಕೈಯಿಂದ ತಗಡಿನ ಡಬ್ಬಿಯನು ಎಳೆದು ಕಿತ್ತುಕೊಂಡ. ಕಿಟಿಕಿ ಮೆಟ್ಟಿಲು ನೆಗೆದು ಏರಿ ಅವನು ಅದನು ಆ ಕಿಟಿಕಿಯ ಹಿಂಬದಿಯಿಂದ ಬೀಸಿ ಒಗೆದ. ಚುಕ್ಕನಿಗೆ ಭಯಂಕರ ಕೋಪ ಬಂತು. "ತಂತಿ ಸುದ್ದಿ, ತಂತಿ ಸುದ್ದಿ" ಎಂದು

ಕಿವಿ ಒಡೆದುಹೋಗುವಂತೆ ಗಟ್ಟಿಯಾಗಿ ಕಿರಿಚಿ ಹೇಳುತ್ತಾ ಟೋಪ್ಪಿ ಕೂಡ ಹಾಕಿಕೊಳ್ಳದೆ ಮನೆಯಿಂದ ಹೊರಗೆ ಓಡಿದ.

ಓದಿನೋಡದ ತಂತಿ ಕಾಗದವು ಒಳಗಿದ್ದ, ಆ ಡಬ್ಬಿಪೆಟ್ಟಿಗೆಗಾಗಿ ಅವರು ಅಲ್ಲೆಲ್ಲ ಹುಡುಕಾಡಿದರು. ಆದರೆ ಪ್ರಯೋಜನವಾಗಲಿಲ್ಲ. ಅದು ಒಂದೋ ಮಂಜಿನ ಅಡಿಯಲ್ಲಿ ಹೂತುಹೋಗಿದೆ, ಇಲ್ಲವೇ ದಾರಿಯಲ್ಲೆಲ್ಲೋ ಬಿದ್ದು ದಾರಿಹೋಕರು ಯಾರೋ ಒಯ್ದುಬಿಟ್ಟಿದ್ದಾರೆ. ಏನಿದ್ದರೂ ಓದಿನೋಡದ ತಂತಿ ಕಾಗದ ಮತ್ತು ಉಳಿದೆಲ್ಲ ನಿಧಿಗಳ ಸಹಿತ ಆ ಪೆಟ್ಟಿಗೆ ಎಂದೆಂದಿಗೂ ಕೈತಪ್ಪಿತು.

ಮನೆಗೆ ಹಿಂತಿರುಗಿ ಬಂದಮೇಲೆ ಚುಕ್ಕಗೆಕ್ಕರು ತುಂಬ ಹೊತ್ತಿನವರೆಗೆ ಸುಮ್ಮನಿದ್ದರು. ಅವರು ಈಗಾಗಲೇ ಜಗಳವಾಡುವುದನು ನಿಲ್ಲಿಸಿಬಿಟ್ಟಿದ್ದರು. ಯಾಕೆಂದರೆ ಅಮ್ಮನ ಕೈಯಿಂದ ಇಬ್ಬರಿಗೂ ಬಿಸಿಬಿಸಿ ಕಜ್ಜಾಯ ಸಿಗುವುದೆಂದು ಅವರಿಗೆ ಗೊತ್ತಿತ್ತು. ಗೆಕ್ಕನಿಗಿಂತ ಪೂರ್ತಿ ಒಂದು ವರ್ಷ ದೊಡ್ಡವನಾದುದರಿಂದ





[illegible] ಸಿಗುವುದು ತನಗೇ ಎಂಬುದು ತಿಳಿದಿದ್ದುದೇ ಚುಕ್ಕನ ಅಂಜಿಕೆ. ಆದುದರಿಂದ ಅವರು ತಲೆ ಹಬೆಏಳುವಷ್ಟು ಆಲೋಚಿಸಿದರು.

"ಏಯ್ ಗೆಕ್ಕ್! ನಾವು ಹೀಗೊಂದು ಉಪಾಯ ಮಾಡೋಣವೇ ? ತಂತಿಯ ವಿಷಯವನೇ ನಾವು ಅಮ್ಮನಿಗೆ ಹೇಳದೇ ಇದ್ದರೆ ? ಒಂದು ತಂತಿ ಸಂದೇಶದಲ್ಲಿ ಅಂಥ ದೊಡ್ಡ ಸಂಗತಿಯೇನಿರುತ್ತದೆ? ಅದಿಲ್ಲವಾದರೂ ನಮ್ಮ ಖುಷಿಗೆ ಏನೂ ಕಮ್ಮಿ ಬರಬಾರದು" ಎಂದ ಚುಕ್ಕ.

"ಸುಳ್ಳು ಹೇಳಬಾರದು. ಸುಳ್ಳು ಹೇಳಿದರೆ ಅಮ್ಮನಿಗೆ ಸಿಟ್ಟು ಏರುತ್ತದೆ" ಎಂದು ಗೆಕ್ಕ್ ನಿಟ್ಟುಸಿರಿಟ್ಟ.

"ಆದರೆ ನಾವು ಸುಳ್ಳು ಹೇಳಬೇಕಾಗಿಲ್ಲ" ಚುಕ್ಕ ಸಂತಸದಿಂದಲೇ ಹೇಳಿದ. "ತಂತಿ ಕಾಗದ ಎಲ್ಲಿದೆ ಎಂದು ಅಮ್ಮ ಕೇಳಿದರೆ ನಾವು ಹೇಳಿದರಾಯಿತು. ಆದರೆ ಅವಳು ಕೇಳದಿದ್ದರೆ ನಾವಾಗಿಯೇ ಎಳೆದುಕೊಳ್ಳುವುದು ಯಾಕೆ ? ಹಾಗಾಗಲು ನಾವು ಅನಗತ್ಯ ಲಾಗಹೊಡೆಯುವವರೇನೂ ಅಲ್ಲವಲ್ಲ ?"

"ಸರಿ" ಗೆಕ್ಕ ಒಪ್ಪಿದ. "ಸುಳ್ಳು ಹೇಳುವುದು ಬೇಡದಿದ್ದರೆ ನೀನು ಹೇಳಿದ ಹಾಗೆ ಮಾಡೋಣ. ಅದೊಂದು ಒಳ್ಳೆಯ ಉಪಾಯ ಕಣೋ ಚುಕ್ಕ್."

ಅವರು ಆ ವಿಷಯವನು ಹಾಗೆ ತೀರ್ಮಾನಿಸುತ್ತಿದ್ದಂತೆಯೇ ಅಮ್ಮ ಬಂದೇಬಿಟ್ಟಳು. ರೈಲಿನಲ್ಲಿ ಒಳ್ಳೆ ಸೀಟುಗಳು ಸಿಕ್ಕಿದ್ದರಿಂದ ಆಕೆ ತುಂಬ ಸಂತುಷ್ಟಳಾಗಿರುವಂತೆ ಕಂಡುಬಂದಳು. ಆದರೆ ಪುತ್ರರತಗಳ ಮುಖ ಜೋಲುಬಿದ್ದಿರುವುದೂ ಕಣ್ಣುಗಳು ತೇವಗೊಂಡಿರುವುದೂ ಅವಳ ಕಣ್ಣಿಗೆ ಬೀಳದಿರಲು ಸಾಧ್ಯವಿಲ್ಲವಾಗಿತ್ತು.

"ಸತ್ಯ ಹೇಳಿ", ಕೋಟಿನ ಮಂಜನು ಕೊಡವುತ್ತಾ ಆಕೆ ಕೇಳಿದಳು. "ಯಾಕೆ ಜಗಳವಾಡಿದಿರಿ ?"

"ನಾವು ಜಗಳವಾಡಿಲ್ಲ" ಚುಕ್ಕನೆಂದ.



“ಅದು ನಿಜ” ಗೆಕ್ಕ ದೃಢೀಕರಿಸಿದ. “ನಾವು ಜಗಳಾಡುವವರಿದ್ದೆವು. ಆಮೇಲೆ ಬೇಡವೆಂದು ತೀರ್ಮಾನಿಸಿದೆವು”

“ಅದು ನನಗೆ ಹಿಡಿಸಿತು” ಅಮ್ಮ ಹೇಳಿದಳು. ಆಕೆ ಕೋಟು ಬಿಚ್ಚಿ ಸೋಫಾದಲ್ಲಿ ಕುಳಿತಳು. ಹಸಿರುಬಣ್ಣದ ದೊಡ್ಡದೊಂದು ಸಣ್ಣವೆರಡು ದಪ್ಪ ಟಿಕೇಟುಗಳನು ಮಕ್ಕಳಿಗೆ ತೋರಿಸಿದಳು.

ಹೆಚ್ಚು ತಡಮಾಡದೆ ಅವರು ರಾತ್ರೆಯೂಟ ಮಾಡಿದರು. ಆಮೇಲೆ ಎಲ್ಲ ಸದ್ದುಗಳೂ ಕಡಿಮೆಯಾದುವು. ಎಲ್ಲರೂ ಮಲಗಿ ನಿದ್ರಿಸಿದರು. ತಂತಿ ಬಂದ ವಿಷಯ ಅಮ್ಮನಿಗೆ ತಿಳಿಯಲು ಸಾಧ್ಯವಿರಲಿಲ್ಲ. ಆದುದರಿಂದ ಸಹಜವಾಗಿಯೇ ಆಕೆ ಮಕ್ಕಳೊಡನೆ ಆ ವಿಷಯ ಎತ್ತಲಿಲ್ಲ.

ಮರುದಿನ ಅವರು ಹೊರಟರು. ಆದರೆ ನಿಲ್ದಾಣದಿಂದ ರೈಲು ರಾತ್ರೆ ತುಂಬ ತಡವಾಗಿ ಹೊರಟಿತ್ತು. ಹಾಗಾಗಿ ಕಿಟಿಕಿಗಳೆಲ್ಲ ಕಪ್ಪಾಗಿದ್ದುವು. ಖುಷಿಕೊಡುವ ಯಾವ ವಿಷಯಗಳನೂ ಚುಕ್ಕಗೆಕ್ಕರು ನೋಡಲಾಗಲಿಲ್ಲ.

[illegible]

[illegible]

[illegible]

[illegible]

ರಾತ್ರೆ ಬಾಯಾರಿದ ಗೆಕ್ಕನಿಗೆ ಎಚ್ಚರವಾಯಿತು. ಛಾವಣಿಯ ಪುಟ್ಟ ದೀಪವನು ಆರಿಸಿದರೂ ಅವನಿಗೆ ಸುತ್ತುಮುತ್ತಲ ಎಲ್ಲವೂ ನೀಲಿ ಬೆಳಕಲ್ಲಿ ಮುಳುಗಿದಂತಿದ್ದುವು. ಬಿಳಿಯ ಮೇಜುಹಾಸಿನ ಮೇಲೆ ಮೇಲಕ್ಕೂ ಕೆಳಕ್ಕೂ ಕುಣಿದಾಡುತ್ತಿದ್ದ ಗಾಜೂ ಈಗ ಹಸಿರಾಗಿ ಕಾಣುತ್ತಿದ್ದ ಹಳದಿ ಕಿತ್ತಳೆಯೂ ಗಾಢ ನಿದ್ರೆಯಲ್ಲಿ ಮುಳುಗಿದ್ದ ಅಮ್ಮನ ಮುಖವೂ– ಎಲ್ಲವೂ.

ಮಂಜು ಅಂಟಿಕೊಂಡಿದ್ದ ಕಿಟಿಕಿಯ ಎಡೆಯಿಂದ ಗೆಕ್ಕನಿಗೆ ಚಂದ್ರ ಕಂಡಿತು. ಮಾಸ್ಕೋದಲ್ಲಿ ಕಾಣುವಂತೆ ಇರಲಿಲ್ಲ ಅದು. ಬಹಳ ದೊಡ್ಡ ಒಂದು ಚಂದ್ರಬಿಂಬ. ತುಂಬ ಎತ್ತರದ ಮಲೆಗಳ ಮೇಲ್ಭಾಗದಲ್ಲಿ ಈಗ ರೈಲು ಓಡುತ್ತಿರುವುದೆಂಬುದು ಅವನಿಗೆ ಖಾತ್ರಿಯಾಗಿತ್ತು. ಆದುದರಿಂದಲೇ ಚಂದ್ರನನು ಇಷ್ಟು ಹತ್ತಿರದಿಂದ ಕಾಣಲು ಸಾಧ್ಯವಾಗುತ್ತಿರುವುದು.

ಅವನು ಅಮ್ಮನನೆಬ್ಬಿಸಿ ನೀರು ಕೇಳಿದ. ಆದರೆ, ಅಮ್ಮ ನೀರು ಕೊಡಲಿಲ್ಲ. ಅದಕ್ಕೆ ಸೂಕ್ತವಾದ ಕಾರಣವೇ ಇತ್ತು. ನೀರಿಗೆ ಬದಲಾಗಿ ಒಂದು ಕಿತ್ತಳೆ ಕ್ತತ ´ರಿಸಿ ಒಂದು ತುಂಡು ತಿಂದುಕೊಳ್ಳಲು ಹೇಳಿದಳು.



[illegible]

[illegible]

[illegible]

ಗೆಕ್ಕನು ಮೊದಲು ಒಂದು ಸೀಟಲ್ಲೂ ಬಳಿಕ ಎರಡನೆಯದರಲ್ಲೂ ಅದಾದ ಬಳಿಕ ಮೂರನೆಯದರಲ್ಲೂ ಹಾಗೆ ಎಲ್ಲ ಸೀಟುಗಳಲ್ಲೂ ಬದಲಿಸಿ ಬದಲಿಸಿ ಕುಳಿತು ಕೊನೆಗೆ ರೈಲಿನ ಅಂಚಿಗೆ ತಲುಪಿದ. ಆದರೆ ಆಗಲೇ ಕಂಡೆಕ್ಟರ್ ಒಂದು ದೀಪ ಸಮೇತ ಅಲ್ಲಿ ಬಂದಿದ್ದ. ಜನರೆಲ್ಲ ನಿದ್ರಿಸುತ್ತಿರುವಾಗ ಅಷ್ಟೊಂದು ಸದ್ದು ಮಾಡುವುದಕ್ಕಾಗಿ ಅವನು ಗೆಕ್ಕನನು ಗದರಿಸಿದ.

ಕಂಡಕ್ಟರ್ ಹೋದಕೂಡಲೇ ಗೆಕ್ಕ್ ತನ ಕೊಠಡಿಗೆ ಬೇಗ ಮರಳಿದ. ಬಹಳ ಒದ್ದಾಡಿ ಹೇಗೋ ಬಾಗಿಲು ತೆರೆದ. ಅಮ್ಮನಿಗೆ ಎಚ್ಚರವಾಗುವುದು ಬೇಡವೆಂದು ಅದನು ಎಚ್ಚರದಿಂದ ಮುಚ್ಚಿದ. ಬಳಿಕ ಮೆತ್ತನೆಯ ಸೀಟಿಗೆ ಹಾರಿ ಕುಳಿತ.

ಚುಕ್ಕನು ಹಾಸಿಗೆ ತುಂಬ ಕೈಮೈ ಚಾಚಿ ಮಲಗಿರುವುದನು ಕಂಡು ಅವನನು ಒಂದು ಬದಿಗೆ ಸರಿಸುವುದಕ್ಕಾಗಿ ಅವನನು ದೂಡಿದ.

ಅಯ್ಯೋ ಅನರ್ಥವಾಯ್ತು! ಬೆಳ್ಳಗಿನ ತಲೆಗೂದಲು ಮತ್ತು ತುಂಬು ಕಪೋಲಗಳುಳ್ಳ ಚುಕ್ಕನ ಬದಲು ಗುಕ್ಕನು ಏನನು ಕಂಡ ಗೊತ್ತೇ ? ಒಬ್ಬ ಮೀಸೆಧಾರಿಯ ಸಿಡುಕು ಮುಖ ! ಗುಕ್ಕನನು ನೋಡಿ ಅದು ಕರ್ಕಶವಾಗಿ ಗರ್ಜಿಸಿತು.

"ಯಾರೋ ಅದು ತಳ್ಳೋದು ನನನು?"

ಗುಕ್ಕನ ಹುಯ್ಯಲು ಕೇಳಿ ಪ್ರಯಾಣಿಕರೆಲ್ಲ ಬರ್ತ್‌ಗಳಿಂದ ಹಾರಿ ಇಳಿದರು. ಲೈಟ್ ಹಾಕಿದರು. ತಾನು ಬಂದು ಸೇರಿದ ಕೋಣೆ ತಪ್ಪಿಬಿಟ್ಟಿದೆ ಎಂಬುದನು ತಿಳಿದಾಗ ಗೆಕ್ಕ್ ಇನಷ್ಟು ಜೋರಾಗಿ ಹುಯ್ಯಲಿಡಲಾರಂಭಿಸಿದ.

ನಡೆದದ್ದೇನೆಂಬುದು ಸ್ಪಷ್ಟವಾದಾಗ ಜನರೆಲ್ಲ ನಕ್ಕುಬಿಟ್ಟರು. ಟ್ರೌಸರ್ ಮತ್ತು ಸೇನಾಸಮವಸ್ತ್ರದ ಅಂಗಿ ಧರಿಸಿದ್ದ ಮೀಸೆಧಾರಿಯು ಗೆಕ್ಕನನು ಅವನ ಕೋಣೆಗೆ ತಲಪಿಸಿ ಹೋದ.

ಗೆಕ್ಕ್ ಮುಸುಕಿ ಹಾಕಿ ಮಲಗಿಕೊಂಡ. ಅವನು ಶಾಂತನಾದ. ರೈಲು ಚಲಿಸುತ್ತಲೇ ಇತ್ತು. ಗಾಳಿ ಸೀಟಿ ಹೊಡೆಯುತ್ತಿತ್ತು.

ವಿಶೇಷವಾದ ಆ ದೊಡ್ಡ ಚಂದ್ರಬಿಂಬವು ಸರಿದಾಡುವ ಗಾಜಿನ ಮೇಲೂ ಬಿಳಿಯ ಮೇಜುಗವಸಿನ ಮೇಲಿದ್ದ ಕಡುಹಳದಿ ಬಣ್ಣದ ಕಿತ್ತಳೆಯ ಮೇಲೂ ಅಮ್ಮನ ಮುಖದಲ್ಲೂ ಅದರ ನೀಲ ಬೆಳಕನು ಹಾಯಿಸುತ್ತಿತ್ತು. ತನ ಮಗನಿಗೆ ಘಟಿಸಿದ ಪೆದ್ದುತನವೇನನೂ ಅರಿಯದೆ ಅಮ್ಮ ನಿದ್ರೆಯಲ್ಲಿ ಏನನೋ ನೋಡಿ ಮುಗುಳುನಗುತ್ತಿದ್ದಳು.

ಕೊನೆಗೆ, ಗೆಕ್ಕನೂ ನಿದ್ರಿಸಿದ.

ಅವನು ಒಂದು ವಿಚಿತ್ರ ಕನಸು ಕಂಡ :

ಚಲಿಸುತ್ತಲೇ ಇದ್ದ ರೈಲು
ಅವನಿಗೆ ಅನಿಸಿತು ಎಲ್ಲೆಲ್ಲೂ ಸದ್ದುಗಳು
ಎತ್ತರದಲ್ಲಿ ಕೇಳಿಸಿಕೊಳ್ಳುವ ದಿಗಂತವೆತ್ತಲೂ
ಗಾಡಿಯ ಪ್ರತೀ ಚಕ್ರವೆಬ್ಬಿಸಿದ
ಸೀತ್ಕಾರಧ್ವನಿ ಗಾಳಿಯಲ್ಲಿ ಮೊಳಗಿತು
ಓಡುತ್ತ ಸಾಗುವ ಗಾಡಿಗಳೆಲ್ಲ
ಇಂಜಿನಿನ ಪಲ್ಲವಿಯನೆತ್ತಿ ಹಾಡಿದುವು.

ಒಂದನೆಯವನು :

ಮುಂದಕೆ ಬಾಗಿ ಧಾವಿಸುವ !
ರಾತ್ರೆಯ ಕತ್ತಲು, ನಮಗಾದರೋ
ನೀಳಕೆ ಸೆಟೆದಿಹ ಪಟ್ಟೆಗಳ
ಮೇಲೆಯೆ ನಾವು ಓಡೋಣ.

ಎರಡನೆಯವನು :

ಹೊಳಪುಳ್ಳೊಬ್ಬ ಎಂಜಿನು ನೀನು
ಮಿನುಗೈ ಮಿನುಗೈ ದೂರದಲಿ
ಇದಿರೇ ಇಲ್ಲದ ಹೆಮ್ಮೀನಂತೆ
ಮಿನುಗೈ ಮಿನುಗೈ ಕಾಂತಿಯಲಿ

ಮೂರನೆಯವನು :

ಮೇಲಕ್ಕೇಳುವ ಜ್ವಾಲೆಗಳೆ !
ಕೂಗುತ ಕರೆಯುವ ಉಗಿಬಂಡಿ
ಮೂಡುದಿಕ್ಕನು ನೋಡುತ ಬೇಗ
ಉರುಳಲಿ ಹಾಗೆ ಚಕ್ರಗಳು.

ನಾಲ್ಕನೆಯವನು :

ಸದ್ದುಗಳೆಲ್ಲವನಡಗಿಪೆವು
ದಾರಿಯ ಕೊನೆಯಲ್ಲಿ !
ನೀಲಮಲೆ ಹತ್ತುತ್ತಲಿರಲು
ಎಲ್ಲ ಸದ್ದುಗಳೊಮ್ಮೆ ನಿಂತಾವು.

***

ಗೆಕ್ಕನಿಗೆ ಎಚ್ಚರವಾದಾಗ ಚಕ್ರಗಳು ಮಾತುಕತೆ ನಿಲ್ಲಿಸಿ ಕಾಲುಗಳ ಮಧ್ಯೆ ಒಂದೇ ತಾಳದಲ್ಲಿ ಶಬ್ದಿಸುತ್ತಿದ್ದುವು. ಮಂಜು ಸೇರಿಕೊಂಡ ಕಿಟಿಕಿಗಳೆಡೆಯಿಂದ ಸೂರ್ಯ ಪ್ರಕಾಶಿಸುತ್ತಿದ್ದ. ಬರ್ತ್‌ಗಳೆಲ್ಲವನ್ನೂ ಝಾಡಿಸಿ ಹಾಸುಗಳನು ಹಾಸಲಾಗಿತ್ತು. ಚುಕ್ಕ ಕೈಕಾಲು ಮುಖ ತೊಳೆದು ಕೂದಲು ಬಾಚಿ ಒಂದು ಆಪ್‌ಲನು ಕಚ್ಚುತ್ತಿದ್ದ. ಅಮ್ಮ ಮೀಸೆಧಾರಿ ಸೈನಿಕನೊಂದಿಗೆ ತೆರೆದಿದ್ದ ಬಾಗಿಲಲ್ಲಿ

ನಿಂತುಕೊಂಡು ಗೆಕ್ಕನ ರಾತ್ರೆಪರಾಕ್ರಮಗಳ ಕುರಿತು ಹೇಳಿ ನಗುತ್ತಿದ್ದಳು. ಸೈನಿಕ ಕೊಟ್ಟಿದ್ದ ಒಂದು ಪೆನ್ಸಿಲನು ಚುಕ್ಕ ಗೆಕ್ಕನಿಗೆ ತೋರಿಸಿಕೊಟ್ಟ. ಅದಕ್ಕೆ ಮದ್ದುಗುಂಡಿನಿಂದ ಮಾಡಿದ್ದ ಒಂದು ಹಳದಿ ಟೊಪ್ಪಿಯಿತ್ತು.

ಆದರೆ, ಅದನು ನೋಡಿದ ಗೆಕ್ಕನಿಗೆ ಅಸೂಯೆಯಾಗಲಿ ಆಸೆಯಾಗಲಿ ಉಂಟಾಗಲಿಲ್ಲ. ಒಂದೊಂದನೂ ಕಳೆದುಕೊಳ್ಳುವುದು, ಅದು ಇದು ಅಂತ ಆಲೋಚಿಸುತ್ತ ಇರುವುದು ಅವನ ಸ್ವಭಾವ. ಅವನು ರಾತ್ರೆಯಲ್ಲಿ ಕೋಣೆತ ʼಪ್ಪಿ ಹೊಕ್ಕಿದ್ದು ಹೋಗಲಿ, ತನ ಟ್ರೌಸರ್ ಎಲ್ಲಿ ಹಾಕಿದ್ದೇನೆಂಬುದು ಕೂಡ ಅವನಿಗೆ ಈಗ ನೆನಪಿಲ್ಲ. ಆದರೆ ಅವನು ತುಂಬ ಚೆನಾಗಿ ಹಾಡಬಲ್ಲವನಾಗಿದ್ದ.

ಮುಖ ತೊಳೆದು ಅಮ್ಮನಿಗೆ ಶುಭೋದಯ ಹೇಳಿದ ಮೇಲೆ ಕಿಟಿಕಿಯ ತಣ್ಣನೆಯ ಗಾಜಿಗೆ ಮುಖವೊತ್ತಿ, ಸಾಗಿ ಹೋಗುವ ಊರುಗಳು ಯಾವ್ಯಾವುವೆಂದೂ ಆ ಊರವರು ಏನೇನು ಮಾಡುತ್ತಿದ್ದಾರೆಂಬುದನೂ ನೋಡುತ್ತಿದ್ದ.







ಚುಕ್ಕನು ಕೋಣೆಗಳಿಗೆಲ್ಲ ಹೊಕ್ಕು ಹೊರಬಂದು ಇತರ ಪ್ರಯಾಣಿಕರನು ಪರಿಚಯಮಾಡಿಕೊಳ್ಳುತ್ತ ಒಂದು ರಬ್ಬರ್ ಮುಚ್ಚಳ, ಒಂದು ಮೊಳೆ, ಒಂದು ತುಂಡು ದಾರ – ಹೀಗೆ ಸಣ್ಣಪುಟ್ಟ ಕೊಡುಗೆಗಳನು ಅವರಿಂದ ಸ್ವೀಕರಿಸುತ್ತಿದ್ದ ಸಂದರ್ಭದಲ್ಲೂ ಗೆಕ್ಕ ಕಿಟಿಕಿಯ ಮೂಲಕ ಹಲವು ವಿಷಯಗಳನು ಕಂಡ.

ಉದಾಹರಣೆಗೆ ಆ ಕಾಡಿನ ಮಧ್ಯೆ ಒಂದು ಗುಡಿಸಲಿತ್ತು. ಶರ್ಟ್ ಮತ್ತು ದೊಡ್ಡ ಎರಡು ಕಂಬಳಿ ಮೆಟ್ಟುಗಳನು ಧರಿಸಿದ್ದ ಒಬ್ಬ ಪುಟ್ಟ ಹುಡುಗ ಒಂದು ಬೆಕ್ಕನೆತ್ತಿಕೊಂಡು ಕಿರುಜಗಲಿಗೆ ನೆಗೆದ. ಬಳಿಕ ಅವನು ಬೆಕ್ಕನು ಎಸೆದ ರಭಸಕ್ಕೆ ಬೆಕ್ಕು ತಿರುಗುತ್ತ ಬಿದ್ದು ಹುಡಿಮಂಜಲ್ಲಿ ಮುಳುಗಿಹೋಯಿತು. ಅದು ಗಾಬರಿಯಿಂದ ಹೊರಬಂದು ಓಡಿಹೋಯಿತು.

ಅವನು ಆ ಬೆಕ್ಕನು ಹಾಗೆ ಎಸೆದುದೇಕೆ? ಒಂದು ವೇಳೆ ಮೇಜಿನ ಮೇಲಿಂದ ಅದು ಏನನಾದರೂ ತೆಗೆದಿರಬಹುದು. ಆ ಗುಡಿಸಲು, ಹುಡುಗ, ಬೆಕ್ಕು – ಇವೆಲ್ಲ ಇಷ್ಟರಲ್ಲೆ ಮರೆಯಾಗಿದ್ದುವು. ಒಂದು ಹೊಲದಲ್ಲಿ ಒಂದು ಕಾರ್ಖಾನೆ ಕಾಣಿಸಿತು. ಅದು ಬಿಳಿಬಣ್ಣದ್ದಾಗಿತ್ತು. ಹೊಗೆಕೊಳವೆಗಳು ಕೆಂಪಾಗಿಯೂ ಹೊಗೆ ಕಪ್ಪಾಗಿಯೂ ಕಿಟಿಕಿಗಳಿಂದ ಬರುವ ಬೆಳಕು ಹಳದಿ ಬಣ್ಣದಿಂದಲೂ ಕೂಡಿದ್ದುವು.

ಅವರು ಆ ಕಾರ್ಖಾನೆಯಲ್ಲಿ ಏನನು ತಯಾರಿಸುತ್ತಿರಬಹುದು? ಆಂ! ಹಾಗೆ ಬರಲಿ! ಒಂದು ಕಾವಲುಮನೆ, ಅದರ ಹತ್ತಿರ ಆಡಿನ ಚರ್ಮದ ಕೋಟು ಧರಿಸಿ ಒಬ್ಬ ಕಾವಲುಗಾರ ನಿಂತುಕೊಂಡಿದ್ದಾನೆ. ಆ ಕೋಟು ಅ





ವನ ಗಾತ್ರವನು ತುಂಬ ಹಿಗ್ಗಿಸಿ ತೋರಿಸುತ್ತದೆ. ಆತನ ಕೈಯಲ್ಲಿನ ಕೋವಿ ತೆಳ್ಳನೆಯ ಒಂದು ಬೈಹುಲ್ಲ ದಂಟಿನಂತೆ ಕಂಡುಬರುತ್ತಿದೆ. ಹಾಗಂತ ಅವನ ಹತ್ತಿರದಲ್ಲೆಲ್ಲೂ ಸುಳಿಯಬಾರದಪ್ಪ!

ಇದೋ ಒಂದು ಕಾಡು ನೃತ್ಯಮಾಡುತ್ತ ಬರುತ್ತಿದೆ. ಮುಂದಿರುವ ಮರಗಳು ಅತಿವೇಗದಲ್ಲಿ ಸುತ್ತಾಡುತ್ತಿರುವಾಗ ಅತ್ತ ಹಿಂದೆ ಇರುವವು ಮಂಜು ತುಂಬಿದ ಹೊಳೆಯೊಂದರ ನಿಧಾನವಾದ ಹರಿವಿನಂತೆ, ಅತ್ತಲೂ ಇತ್ತಲೂ ಮೆಲ್ಲಗೆ ತೂನೆದಾಡುತ್ತಿವೆ.

ಗೆಕ್ ಚುಕ್ಕನನು ಕರೆದ. ಒಂದಷ್ಟು ಉಡುಗೊರೆಗಳೊಂದಿಗೆ ಅವನು ಕೋಣೆಗೆ ಆಗತಾನೇ ಹಿಂತಿರುಗಿ ಬಂದಿದ್ದ. ಈಗ ಅವರು ಜತೆಯಲ್ಲಿ ಕಿಟಿಕಿಯಿಂದ ಹೊರಗೆ ನೋಡುತ್ತಿದ್ದರು.

ಕಮ್ಮಿಯೆಂದರೆ ಒಂದುನೂರರಷ್ಟು ಎಂಜಿನ್‌ಗಳಾದರೂ ಹೊಗೆಯುಗುಳುತ್ತ, ಸೀಟಿ ಹೊಡೆಯುತ್ತ ಅತ್ತಲೂ ಇತ್ತಲೂ ಹೋಗುತ್ತಿದ್ದವು. ಒಳ್ಳೆ ಬೆಳಕುಳ್ಳ ದೊಡ್ಡ ಸ್ಟೇಷನ್‌ಗಳನೂ ಮಾಸ್ಕೋದಲ್ಲಿ ಅವರ ಮನೆಯ ಸಮೀಪದ ತಿರುವಿನಲ್ಲಿನ ಕಿರಾಣಿ ಅಂಗಡಿಯಷ್ಟೇ ಗಾತ್ರದ ಪುಟ್ಟ ಸ್ಟೇಷನುಗಳನೂ ಹಿಂದಿಕ್ಕುತ್ತ ರೈಲು ಮುಂದಕ್ಕೆ ಸಾಗಿತು.

ಆದಿರು, ಕಲ್ಲಿದ್ದಲು, ರೈಲಿನ ಅರೆವಾಸಿ ದಪ್ಪಗೆ ಇರಬಹುದಾದ ಮರದ ದಿಮ್ಮಿಗಳನು ಹೇರಿದ್ದ ರೈಲುಗಾಡಿಗಳು ದಾಟಿ ಹೋದುವು.




ದನಗಳನೂ ಎತ್ತುಗಳನೂ ಹೇರಿದ್ದ ಒಂದು ರೈಲು ಅವರನು ಒಮ್ಮೆ ದಾಟಿಹೋಯಿತು. ಸಣ್ಣಕೆ ದನಿಯ ಕೌತುಕಕರವಾದ ಒಂದು ಪುಟ್ಟ ಕೋಚೀ ಅದರ ಎಂಜಿನ್ ಆಗಿತ್ತು. ಎತ್ತೊಂದು ಒಮ್ಮೆಲೆ ಜೋರಾಗಿ ಗುಟುರಿಕ್ಕಿತು. ಎಂಜನ್ ಡ್ರೈವರ್ ತಿರುಗಿ ನೋಡಿದ. ದೊಡ್ಡ ಇನೊಂದು ಇಂಜಿನ್ ಹಿಂದಿನಿಂದ ಬರುತ್ತಿದೆಯೆಂದು ಅವನು ತಿಳಿದುಕೊಂಡಿರಲೂ ಸಾಕು.


ಸಣ್ಣದೊಂದು ಪ್ಲಾಟ್‌ಫಾರ್ಮ್‌ನಲ್ಲಿ ಒಂದು ಭಾರೀ ಕವಚಿತ ವಾಹನದ ಸಮೀಪ ಅವರ ಗಾಡಿ ನಿಂತಿತು. ಅದರ ಎಲ್ಲ ಕಡೆಗಳಿಂದಲೂ ಟಾರ್ಪಾಲ್ ಮುಚ್ಚಿದ್ದ ತೋಪುಗಳು ಭಯಾನಕವಾಗಿ ಹೊರತಳ್ಳಿ ನಿಂತಿದ್ದುವು. ಉತ್ಸಾಹಭರಿತರಾದ ಕೆಂಪು ಸೇನೆಯ ಜನ ನಗುತ್ತಿದ್ದರಲ್ಲದೆ ಚಳಿ ದೂರಮಾಡುವುದಕ್ಕಾಗಿ ನೆಲವನು ತುಳಿಯುತ್ತಿದ್ದರು. ಮಾತ್ರವಲ್ಲ, ಗವುಸು ಹಾಕಿದ ಕೈಗಳನು ಪರಸ್ಪರ ಗುದ್ದುತ್ತ, ತೋಪುಗಳ ಸುತ್ತ ನಿಂತಿದ್ದರು.

ಆದರೆ ಚರ್ಮದ ಕೋಟು ಧರಿಸಿದ್ದ ಒಬ್ಬಾತ ಮಾತ್ರ ಏನೂ ಮಾತಾಡದೆ ಚಿಂತಾಮಗನಾಗಿ ರೈಲಿನ ಹತ್ತಿರ ನಿಂತುಕೊಂಡಿದ್ದ. ಇದು ಅವರ ಕಮಾಂಡರ್ ಆಗಿರಬೇಕೆಂದೂ ಮೇಲಿನ ಆಜ್ಞೆಗಾಗಿ ಕಾಯುತ್ತಿದ್ದಾನೆಂದೂ ಚುಕ್ಕಗೆಕ್ಕರು ನಿರ್ಣಯಿಸಿಕೊಂಡರು.

ಹಾಗೆ ಹಲವಾರು ಸಂಗತಿಗಳನು ಅವರು ದಾರಿಯಲ್ಲಿ ಕಂಡರು. ಹೊರಗೆ ಬಿರುಗಾಳಿ ಬೀಸುತ್ತಿದ್ದುದು ಮತ್ತು ಕಿಟಿಕಿಗಳಲ್ಲಿ ಹಿಮ ಮುಚ್ಚಿಕೊಂಡದ್ದು ಮಾತ್ರ ಕಷ್ಟಕ್ಕಿಟ್ಟುಕೊಂಡಿತ್ತು, ಎಂದಷ್ಟೇ.







ಕೊನೆಗೆ ಒಂದು ಮುಂಜಾನೆ ಅವರ ರೈಲು ಒಂದು ಪುಟ್ಟ ಸ್ಟೇಷನ್‌ನಲ್ಲಿ ಬಂದು ನಿಂತಿತು.

ಅಮ್ಮ ಚುಕ್ಕನನೂ ಗೆಕ್ಕನನೂ ಪ್ಲಾಟ್‌ಫಾರ್ಮ್‌ಗೆ ಇಳಿಸಿದ್ದಲ್ಲದೆ ಸೈನಿಕನ ಕೈಯಿಂದ ಸಾಮಾನುಗಳನು ಇಳಿಸಿಕೊಂಡಷ್ಟರಲ್ಲಿ ರೈಲು ಚಲಿಸಿತು.

ಮೂಟೆಗಳನೆಲ್ಲ ಮಂಜಿನಮೇಲೆ ಹಾಕಿದರು. ಮರದಿಂದ ನಿರ್ಮಿಸಿದ್ದ ಆ ಪ್ಲಾಟ್‌ಫಾರ್ಮ್‌ನಿಂದ ಕೆಲವು ನಿಮಿಷಗಳಲ್ಲಿ ಜನ ಖಾಲಿಯಾದರು. ಆದರೆ ಅಪ್ಪ ಅಲ್ಲೆಲ್ಲೂ ಕಾಣಿಸಲಿಲ್ಲ. ಅಮ್ಮನಿಗೆ ಅಪ್ಪನ ಮೇಲೆ ಕಡುಗೋಪ ಬಂತು. ಮಕ್ಕಳನು ಮೂಟೆಗಳ ಹತ್ತಿರ ನಿಲ್ಲಿಸಿ ಅವಳು ಹಿಮಗಾಡಿಗಳ ಬಳಿಗೆ ಹೋದಳು, ತಮಗೆ ಯಾವ ಗಾಡಿಯನು ಕಳುಹಲಾಗಿದೆ ಎಂದು ತಿಳಿದುಕೊಳ್ಳಲು. ಯಾಕೆಂದರೆ ಅಪ್ಪನ ಬಿಡಾರಕ್ಕೆ ತಲುಪಲು ಅವರು ತೈಗಾದ ದಾರಿಯಾಗಿ ಇನೂ ಒಂದು ನೂರು ಕಿಲೋಮೀಟರ್ ಹೋಗಬೇಕಾಗಿತ್ತು. ಅಮ್ಮ ಹೋಗಿ ತುಂಬ ಹೊತ್ತು ಕಳೆಯಿತು. ಇವುಗಳ ಮಧ್ಯೆ ಕೇಡಿಗನಂತೆ ಕಾಣುವ ಒಂದು ಆಡು ಅಲ್ಲಿ ಕಾಣಿಸಿಕೊಂಡಿತು.

[illegible]

[illegible]

[illegible]

[illegible]

ಶುರುವಿಗೆ ಅದು ಮಂಜುಬಿದ್ದು ಗಟ್ಟಿಯಾದ ಒಂದು ಮರದ ತುಂಡಿನ ತೊಗಟೆಯನು ಕಚ್ಚಿನೋಡಿತು. ಬಳಿಕ ಸಿಟ್ಟಿನಿಂದ ಒಮ್ಮೆ ಅರಚಿ ಚುಕ್ಕಗೆಕ್ಕರನು ದುರುಗುಟ್ಟಿ ನೋಡತೊಡಗಿತು.

ಚುಕ್ಕಗೆಕ್ಕರು ಕೂಡಲೇ ಮೂಟೆಗಳ ಹಿಂದೆ ಅಡಗಿಕೊಂಡರು. ಇಲ್ಲಿನ ಆಡುಗಳಿಗೆ ಬೇಕಾಗಿರುವುದೇನೆಂದು ಯಾರಿಗ್ಗೊತ್ತು! ಆದರೆ ಆಗ ಅಮ್ಮ ಬಂದುಬಿಟ್ಟಳು. ಹೆಚ್ಚಿನಂಶ, ಅಪ್ಪನಿಗೆ ತಮ್ಮ ಮರುತಂತಿ ಸಿಕ್ಕಿರಲಾರದೆಂದೂ ಆದಕಾರಣ ಸ್ಟೇಷನಿಗೆ ಹಿಮಗಾಡಿ ಕಳುಹಿಸಲಿಲ್ಲವೆಂದೂ ಅವಳು ಹೇಳಿದಳು.

ಅವಳು ಒಬ್ಬ ಹಿಮಗಾಡಿಯವನನು ಕರೆದಳು. ಆತ ಉದ್ದದ ಚಾಟಿಯಿಂದ ಆ ಆಡಿನ ಬೆನಿಗೆ ಹೊಡೆದ. ಆಮೇಲೆ ಮೂಟೆಗಳನೆಲ್ಲ ಎತ್ತಿ ಸ್ಟೇಷನಿನ ಒಳಗಿದ್ದ ಊಟದಮನೆಗೆ ಹೋದ.

ಊಟದ ಮನೆ ತುಂಬ ಚಿಕ್ಕದಿತ್ತು. ಕೌಂಟರ್‌ನ ಹಿಂಬದಿಯಲ್ಲಿ ಚುಕ್ಕನಷ್ಟು ಗಾತ್ರವಿದ್ದ ಒಂದು ದಪ್ಪದ ಸಮೊವಾರ್ (ಚಾ ಕುದಿಸುವ ಪಾತ್ರೆ) ಘೂತ್ಕಾರ ಸದ್ದು ಹೊರಹೊರಡಿಸುತ್ತಿತ್ತು. ಅದು ನಡುಗುತ್ತಲೂ ಸೀಟಿಹೊಡೆಯುತ







ಲೂ ಇತ್ತು. ಅದರಿಂದ ದಪ್ಪಗಿನ ಉಗಿ ಮೋಡದ ಹಾಗೆ ಹಲಗೆ ಹಾಸಿದ್ದ ಅ ಟ್ಟಕ್ಕೆ ಏರುತ್ತಿತ್ತು. ಚಳಿಯಿಂದ ಪಾರಾದ ಒಂದಷ್ಟು ಗುಬ್ಬಚ್ಚಿಗಳು ಅಲ್ಲಿ ಕುಳಿತ ು ಚಿಲಿಪಿಲಿಗುಟ್ಟುತ್ತಿದ್ದುವು.

ಚುಕ್ಕಗೆಕ್ಕರು ಚಾಕುಡಿಯುತ್ತಿದ್ದಾಗ ಅಮ್ಮ ಹಿಮಗಾಡಿಯವನೊಂದಿಗೆ ದರ ನಿಗದಿ ಮಾಡುತ್ತಿದ್ದಳು. ತೈಗಾದ ಮೂಲಕ ಉದ್ದೇಶಿತ ಜಾಗಕ್ಕೆ ಅವರನು ತ ಲುಪಿಸಲು ಆತ ದೊಡ್ಡ ಒಂದು ಮೊತ್ತ ಹೇಳಿದ. ನೂರು ರೂಬಲ್. ಆದರೆ ಯೋಚನೆ ಮಾಡಿ ನೋಡಿದರೆ ಆ ಜಾಗ ಬಹಳ ದೂರವಿತ್ತು. ಕೊನೆಗೆ ಕೂಲಿಯ ವಿಷಯದಲ್ಲಿ ಅವರು ಒಂದು ತೀರ್ಮಾನಕ್ಕೆ ಬಂದರು. ಗಾಡಿಯವನು ರೊಟ್ಟಿ, ಒಣಹುಲ್ಲು, ಆಡಿನ ಚರ್ಮದ ಕಂಬಳಿ –ಇತ್ಯಾದಿಗಳನು ತೆಗೆದುಕೊಂಡು ಬರಲು ಅವನ ಮನೆಗೆ ಹೋದ.

"ನಾವು ಬಂದ ವಿಷಯ ಅಪ್ಪನಿಗೆ ಗೊತ್ತಾಗುವುದೇ ಸಾಧ್ಯವಿಲ್ಲ" ಅಮ್ಮ ಹೇಳಿದಳು. "ನಮ್ಮನು ಕಾಣುವಾಗ ಅವರಿಗೆ ಎಂಥ ಅಚ್ಚರಿ ಮತ್ತು ಸಂತ ಸವಾದೀತು!"



"ಹೌದಲ್ಲವೇ ?" ಚಾ ಕುಡಿಯುತ್ತಿದ್ದುದರ ನಡುವೆ ಚುಕ್ ಬಹಳ ಗಂಭೀರವಾಗಿ ಹೇಳಿದ. "ನನಗೂ ಅಚ್ಚರಿಯೂ ಸಂತಸವೂ ಆದೀತು."

"ನನಗೂ" ಗೆಕ್ಕನೆಂದ. "ನಾನೊಂದು ವಿಷಯ ಹೇಳುವೆ. ನಾವು ಅಡಗಿ ಅಡಗಿಕೊಂಡು ಅಲ್ಲಿಗೆ ಹೋಗೋಣ. ಅಪ್ಪ ಹೊರಗೆ ಎಲ್ಲಿಯಾದರೂ ಹೋಗಿದ್ದರೆ ನಾವು ಮೂಟೆಗಳನು ಅಡಗಿಸಿಟ್ಟು ಮಂಚದ ಸಂದಿನಲ್ಲಿ ಅವಿತುಕೊಳ್ಳೋಣ. ಅಪ್ಪ ಬಂದು ಅದರ ಮೇಲೆ ಕುಳಿತಾರು. ನಾವು ಉಸಿರು ಹಿಡಿದುಕೊಂಡಿರುತ್ತೀವಲ್ಲ ? ಒಮ್ಮೆಲೆ ನಾವು ಜೋರಾಗಿ ಬೊಬ್ಬೆ ಮಾಡೋಣವಂತೆ! ಆಗದೇ ?"

"ನಾನು ಯಾವ ಮಂಚದ ಕೆಳಗೂ ಅವಿತುಕೊಳ್ಳುವುದಾಗಲಿ ಸದ್ದುಮಾಡುವುದಾಗಲಿ ಮಾಡುವುದಿಲ್ಲ" ಅಮ್ಮ ಎಂದಳು. "ನೀವು ಅಡಗಿ ಕುಳಿತುಕೊಳ್ಳುವುದೋ ಸದ್ದು ಮಾಡುವುದೋ ಏನು ಬೇಕಾದರೂ ಮಾಡಿಕೊಳ್ಳಿ. ಚುಕ್ಕಾ, ನೀನು ಯಾಕೆ ಕಿಸೆಗೆ ಸಕ್ಕರೆ ಸುರಿದುಕೊಳ್ಳುತ್ತಿದ್ದಿ ? ಈಗಾಗಲೇ ಅವರೆಡೂ ತುಂಬಿದ್ದಾವೆ. ಕಣ್ಣಿಗೆ ಬಿದ್ದ ಕಡ್ಡಿ ಕಸವನೆಲ್ಲ ನೀನು ಹೆಕ್ಕಿಕೊಂಡಿದ್ದಿ."





"ಕುದುರೆಗೆ ಕೊಡುವುದಕ್ಕಮ್ಮ." ಚುಕ್ಕ ಸಮಾಧಾನದಿಂದಲೇ ಹೇಳಿದ. "ಗೆಕ್ಕ್, ನೀನೂ ಒಂದು ಬನ್ಸ್ ಕೈಯಲ್ಲಿ ಹಿಡಿದುಕೋ. ನೀನು ಏನೂ ಕೈಯಲ್ಲಿ ತೆಗೆದುಕೊಳ್ಳುವುದಿಲ್ಲ. ಆಮೇಲೆ ಯಾವಾಗಲೂ ನನಲ್ಲಿ ಕೇಳುವವನು."

ಹೆಚ್ಚು ತಡವಿಲ್ಲದೆ ಗಾಡಿಯವನು ಬಂದ. ದೊಡ್ಡದಾಗಿಯೇ ಇದ್ದ ಹಿಮಗಾಡಿಗೆ ಮೂಟೆಗಳನು ಏರಿಸಿದ. ಕೆಳಗೆ ಒಣಹುಲ್ಲು ಹರಡಿದ. ಮಕ್ಕಳನು ಒಳಗೆ ಹತ್ತಿಸಿದ. ಕಂಬಳಿಯಿಂದಲೂ ಆಡಿನ ಚರ್ಮದ ಹೊದಿಕೆಯಿಂದಲೂ ಮುಚ್ಚಿದ.

ದೊಡ್ಡ ನಗರಗಳು, ಕಾರ್ಖಾನೆಗಳು, ರೈಲುನಿಲ್ದಾಣಗಳು, ಗ್ರಾಮಗಳು, ಕುಗ್ರಾಮಗಳು – ಎಲ್ಲವುಗಳಿಂದಲೂ ಅವರು ಅಗಲಿ ದೂರವಾದರು. ಈಗ ಕುರುಚಲು ಕಾಡುಗಳ, ಮೃಗಗಳ, ಎಡೆಯಿಲ್ಲದಂತೆ ದಟ್ಟವಾಗಿದ್ದು ಕತ್ತಲುಕಟ್ಟಿರುವ ಕಾಡುಗಳ – ಊರು ಅವರ ಮುಂದಿದ್ದುದು.

***

ಹೊತ್ತು ಕತ್ತಲಾಗುವ ವರೆಗೆ ಅವರು ಆಹ್ಲಾದದಿಂದಲೇ ಗಾಡಿ ಓಡಿಸಿ ಸಾಗಿದರು. ಪ್ರಾಯಪ್ರಬುದ್ಧವಾಗಿದ್ದ ತೈಗಾದ ಮನೋಹರತೆಯನು ಅವರು ಬಾಯಿಬಿಟ್ಟುಕೊಂಡು ಅಚ್ಚರಿಯಿಂದಲೇ ನೋಡಿದರು. ಆದರೆ ಗಾಡಿಯವನ ಬೆನ್ನಿನ ಕಾರಣದಿಂದ ದಾರಿಯನು ಸರಿಯಾಗಿ ನೋಡಲು ಸಾಧ್ಯವಾಗದ ಚುಕ್ಕನಿಗೆ ಅಸ್ವಸ್ಥತೆ ಉಂಟಾಯಿತು. ಒಂದು ಬನ್ನಾಗಲಿ ಕಡುಬಾಗಲಿ ಬೇಕೆಂದು ಅಮ್ಮನಲ್ಲಿ ಬೇಡಿದ.

ಅಮ್ಮ ಅವನಿಗೆ ಯಾವುದನೂ ಕೊಡಲಿಲ್ಲ. ಅವನು ಮುಖ ಊದಿಸಿಕೊಂಡು ಕುಳಿತ. ಬೇರೇನೂ ಮಾಡಲು ತೋಚದೆ ಅವನು ಗೆಕ್ಕನನು ಹಿಮಗಾಡಿಯ ಅಂಚಿಗೆ ತಳ್ಳತೊಡಗಿದ.

ಗೆಕ್ಕ್ ಆರಂಭದಲ್ಲಿ ಸಮಾಧಾನದಿಂದಲೇ ಇದ್ದ. ಆದರೆ, ಸ್ವಲ್ಪ ಹೊತ್ತು ಕಳೆದಾಗ ತಾಳ್ಮೆ ತಪ್ಪಿದ ಅವನು ಗೆಕ್ಕನ ಮೇಲೇ ನೆಗೆದ. ಆಡಿನ ತೊಗಲಿನ ದಪ್ಪ

ಕಂಬಳಿಯ ಕಾರಣದಿಂದ ಅವರಿಬ್ಬರಿಗೂ ಕೈಯೆತ್ತಲು ಸಾಧ್ಯವಾಗಲಿಲ್ಲ. ದಪ್ಪ ಟೊಪ್ಪಿ ಧರಿಸಿದ್ದ ತಲೆಗಳಿಂದ ಪರಸ್ಪರ ಢೀ ಕೊಡಲು ಮಾತ್ರ ಸಾಧ್ಯವಾಯಿತು. ಅಮ್ಮ ಅವರನು ನೋಡಿ ನಕ್ಕಳು. ಗಾಡಿಯವನು ಕುದುರೆಗಳಿಗೆ ಚಾಟಿಯಿಂದ ಬಾರಿಸಿದ. ಅವು ವೇಗವಾಗಿ ಓಡಿದವು.

ಮೃದುವಾದ ರೋಮಗಳಿಂದ ಆವೃತವಾದ ಎರಡು ಬಿಳಿ ಮೊಲಗಳು ದಾರಿಯ ಮಧ್ಯಕ್ಕೆ ಕುಪ್ಪಳಿಸುತ್ತ ಬಂದು ಕುಣಿದಾಡಲಾರಂಭಿಸಿದುವು.

"ಹೋ! ಓ.. ಹೋ.. ಹೋ..!" ಗಾಡಿಯವ ಕೂಗಿ ಹೇಳಿದ. "ಓಡಿ ತಪ್ಪಿಸಿಕೊಳ್ಳಿ. ಇಲ್ಲವಾದರೆ ಗಾಡಿ ನಿಮ್ಮ ಮೇಲೇ ಹರಿದೀತು!!"

ತುಂಟತನದಿಂದ ಆ ಮೊಲಗಳು ಪೊದರುಕಾಡಿನೊಳಗೆ ಓಡಿ ಮರೆಯಾದುವು.

ಕೊರೆದುಬಿಡುವಂತೆ ಶೀತಗಾಳಿ ಅವರ ಮುಖಕ್ಕೆ ಬಡಿಯಿತು. ಚುಕ್ಕಗೆಕ್ಕರಿಗೆ ಪರಸ್ಪರ ತೆಕ್ಕೆಹಾಕಿಕೊಳ್ಳದಿರಲು ಆಗಲಿಲ್ಲ. ಹಿಮಗಾಡಿ ಗುಡ್ಡದ ಮೇಲಿನಿಂದ ತೈಗಾದ ಮೂಲಕ ಕೆಳಕ್ಕೆ ಓಡಿತು. ಅವರು ಸಮೀಪಿಸುತ್ತಿದ್ದ ನೀಲಮಲೆಯ ಮೇಲೆ ನಿಧಾನವಾಗಿ ಉದಿಸಿ ಬರುವ ಚಂದ್ರಬಿಂಬದ ನೇರಕ್ಕೆ ಅದು ಓಡುತ್ತಿತ್ತು.

ಹಿಮದಿಂದ ಮುಚ್ಚಲ್ಪಟ್ಟ ಪುಟ್ಟದೊಂದು ಗುಡಿಸಲ ಬಳಿ ಕುದುರೆಗಳು ಫಕ್ಕನೆ ತಾವಾಗಿಯೇ ನಿಂತುವು.

"ಇಲ್ಲೇ ನಾವು ರಾತ್ರಿ ಕಳೆಯೋದು." ಹಿಮಗಾಡಿಯಿಂದ ಇಳಿಯುತ್ತ ಗಾಡಿಯವನೆಂದ, "ಇದು ನಮ್ಮ ಬಿಡಾರ."





ಗುಡಿಸಲು ಪುಟ್ಟದಾಗಿದ್ದರೂ ಗಟ್ಟಿಮುಟ್ಟಾಗಿತ್ತು. ಅಲ್ಲಿ ಜನವಾಸ ಇರಲಿಲ್ಲ.

ವಿಳಂಬಿಸದೆ ಅವನು ಒಲೆಯಲ್ಲಿ ನೀರಿಟ್ಟ. ಬಳಿಕ ಪೊಟ್ಟಣವೊಂದರಲ್ಲಿ ಒಂದಷ್ಟು ಊಟ ತೆಗೆದುಕೊಂಡು ಬಂದ.

ಆ ಸೋಸೇಜ್‌ನಿಂದ ಎಲ್ಲಿಗಾದರೂ ಮೊಳೆ ತಗಲಿಸಬಹುದು. ಅದು ಅಷ್ಟೊಂದು ಗಟ್ಟಿಯಾಗಿಯೂ ಮರಗಟ್ಟಿಯೂ ಇದೆ. ಆತ ಅದನು ಕುಡಿಯುವ ನೀರಲ್ಲಿ ಹಾಕಿ ಕುದಿಸಿದ. ರೊಟ್ಟಿ ತುಂಡುಗಳನು ಒಲೆಯಲ್ಲಿಟ್ಟು ಬಿಸಿ ಮಾಡಿದ.

ಒಲೆಯ ಹಿಂಭಾಗದಲ್ಲಿ ಕೈಸರಿಸಿ ಹುಡುಕಾಡಿದಾಗ ಚುಕ್ಕನಿಗೆ ಡೊಂಕಾದ ಒಂದು ಸ್ಪ್ರಿಂಗ್‌ನ ತುಂಡು ಸಿಕ್ಕಿತು. ಜಂತುಗಳನು ಹಿಡಿಯುವ ಉರುಳಿನ ಅಂಗ ಆ ಸ್ಪ್ರಿಂಗ್ ಎಂದು ಗಾಡಿಯವನು ಅವನಿಗೆ ಹೇಳಿದ.

ತುಕ್ಕು ಹಿಡಿದ ಆ ಸ್ಪ್ರಿಂಗನು ಯಾರೂ ಉಪಯೋಗಿಸುತ್ತಿರಲಿಲ್ಲವೆಂಬುದು ಸ್ಪಷ್ಟವಿತ್ತು. ಆರಂಭದಲ್ಲೇ ಅದು ಚುಕ್ಕನಿಗೆ ಗೊತ್ತಾಗಿತ್ತು.

ರಾತ್ರೆಯ ಊಟ ಮುಗಿಸಿ ಅವರು ಮಲಗಿದರು. ಗೋಡೆಯ ಸಮೀಪ ಮರದ ಅಗಲವಾದ ಒಂದು ಮಂಚವಿತ್ತು. ತರಗೆಲೆಗಳನು ತುಂಬಿಸಿ ಅದರ ಹಾಸಿಗೆಯನು ಮಾಡಲಾಗಿತ್ತು. ಗೋಡೆಯ ಬದಿಯಲ್ಲೋ ಮಧ್ಯದಲ್ಲೋ





ಮಲಗಲು ಗೆಕ್ಕ್ ಇಷ್ಟಪಡಲಿಲ್ಲ. ಈಚೆ ಬದಿಯಲ್ಲಿ ಮಲಗಲು ಅವನಿಗೆ ಇಷ್ಟವಿತ್ತು. "ಲಾಲೀ... ಲಾಲೀ... ಮಲಗೆನ ಮಗನೇ, ಕಣ್ಣಗೊಂಬೆಯೇ ಕಣ್ಣಮುಚ್ಚು, ಹಾಸಿಗೆ ಹೊರಬದಿಗೆ ಮಲಗಬೇಡವ್ವೋ ಕಂದ" ಎಂಬ ಪುಟ್ಟ ಜೋಗುಳ ಹಾಡಿಯೇ ಮಗುವಿದ್ದಾಗ ಮಲಗುತ್ತಿದ್ದುದು ಅವನಿಗೆ ಈಗಲೂ ನೆನಪಲ್ಲಿತ್ತಾದರೂ ಅವನು ಯಾವಾಗಲೂ ಹೊರ ಅಂಚಲ್ಲೇ ಮಲಗಿ ನಿದ್ರಿಸುತ್ತಿದ್ದುದು.

ಮಧ್ಯೆ ಮಲಗಿಸಿದರೆ ಅವನು ಹತ್ತಿರ ಮಲಗುವವರ ಮೈಯಿಂದ ಹೊದಿಕೆ ಸೆಳೆದು ತೆಗೆಯುವುದಲ್ಲದೆ ಮೊಣಕೈಯಿಂದ ಅವರನು ಇರಿಯುವವನು. ಈಗ ಚುಕ್ಕನ ಹೊಟ್ಟೆಗೆ ಮೊಣಕಾಲಿನಿಂದ ತಿವಿಯದಿರಲಾರ ಎಂಬುದು ಖಾತ್ರಿ.

ಅವರು ಬಟ್ಟೆ ಬದಲಾಯಿಸದೆ ಮಲಗಿ ಆಡಿನ ತೊಗಲಿನ ಕಂಬಳಿ ಹೊದ್ದುಕೊಂಡರು. ಚುಕ್ಕ ಗೋಡೆಯ ಬದಿಗೆ ಮಲಗಿದ. ಅಮ್ಮ ಮಧ್ಯೆಯೂ ಗೆಕ್ಕ್ ಹೊರಬದಿಗೂ ಮಲಗಿದರು.

ಗಾಡಿಯವನು ಮೇಣದ ಬತ್ತಿಯನು ಊದಿ ನಂದಿಸಿ ಒಲೆಯ ಮೇಲಿದ್ದ ತಟ್ಟಿನ ಮೇಲೆ ಹತ್ತಿ ಮಲಗಿಕೊಂಡ. ಅವರೆಲ್ಲರೂ ಕೂಡಲೇ ನಿದ್ರಿಸಿದರು. ಆದರೆ, ರೂಢಿಯಂತೆ ಗೆಕ್ಕ ರಾತ್ರೆ ಬಾಯಾರಿಕೆಯಿಂದ ಎಚ್ಚರವಾದ.

ಅರ್ಧನಿದ್ರೆಯಲ್ಲೇ ಕಂಬಳಿ ಮೆಟ್ಟುಗಳನು ಮೆಟ್ಟಿ ಮೇಜಿನವರೆಗೆ ನಡೆದುಹೋಗಿ ಚಾಪಾತ್ರೆಯಿಂದ ಒಂದಷ್ಟು ನೀರು ಕುಡಿದ. ಆಮೇಲೆ ಕಿಟಿಕಿಯ ಬಳಿಯಿದ್ದ ಒಂದು ಸ್ಟೂಲಲ್ಲಿ ಹೋಗಿ ಕುಳಿತ.

ಮೋಡಗಳೆಡೆಯಲ್ಲಿ ಚಂದ್ರ ಮರೆಯಾಗಿದ್ದ. ಮಂಜುಕರಗಿದ್ದ ಕಿಟಿಕಿಯ ಗಾಜುಗಳೆಡೆಯಿಂದ ನೋಡಿದಾಗ ಹೊರಗಿನ ಹಿಮರಾಶಿಗಳಿಗೆ ಕರಿನೀಲಿ ಬಣ್ಣವಿದೆಯೆಂದು ಅನಿಸುತ್ತಿತ್ತು.

"ಅಪ್ಪ ಬಂದಿರುವುದು ಬಹುಶಃ ಭೂಮಿಯ ಇನೊಂದು ಅಂಚಿಗೆ ಎಂದು ತೋರುತ್ತದೆ."

ಇದಕ್ಕಿಂತಲೂ ದೂರ ಇರಬಹುದಾದ ಸ್ಥಳಗಳು ಹೆಚ್ಚು ಇರಲಾರದೆಂದು ಗೆಕ್ಕನಿಗೆ ತೋರಿತು.

ಒಮ್ಮೆಲೆ ಅವನು ತಲೆಯೆತ್ತಿದ. ಕಿಟಿಕಿಯ ಹೊರಗಿನಿಂದ ಯಾರೋ ತಟ್ಟುತ್ತಿದ್ದಾರೆಂದು ಅವನಿಗೆ ತೋರಿತು. ಅಲ್ಲ, ತಟ್ಟುವುದಲ್ಲ, ಯಾರದೋ ಭಾರವಾದ ಪಾದಗಳ ಅಡಿಯಲ್ಲಿ ಮಂಜು ಕರಗಿ ಹುಡಿಯಾಗುವ ಸದ್ದಿನಂತೆ ಇತ್ತು ಅದು. ಹೌದು, ಅದೇ! ಹೊರಗೆ ಕತ್ತಲಲ್ಲಿ ಯಾವುದೋ ಒಂದು ಉಸಿರಾಡುತ್ತಿದೆ, ಅಲುಗಾಡುತ್ತಿದೆ, ಕಾಲು ಅಲುಗಾಡಿಸುತ್ತಿದೆ. ಅದು ಒಂದು ಕರಡಿ ಎಂಬುದು ಗೆಕ್ಕನಿಗೆ ಖಾತ್ರಿಯಾಯಿತು.

"ದುಷ್ಟ ಕರಡಿ! ನಿನಗೇನು ಬೇಕು ? ಅಪ್ಪನ ಬಳಿ ತಲುಪಲು ನಾವು ಎಷ್ಟು ದಿನ ತೆಗೆದುಕೊಂಡೆವು. ಹಾಗಿದ್ದೂ ಇನು ಎಂದಿಗೂ ನಾವು ಅಪ್ಪನನು ಕಾಣದ ಹಾಗೆ ನಮ್ಮನು ತಿನಬೇಕೆಂದಿದ್ದೀಯ ? ಓ, ಅದು ಬೇಡ. ಯಾರಾದರೂ ಗುರಿತಪ್ಪದ ಕೋವಿಯಿಂದ ನಿನಗೆ ಗುಂಡು ಹೊಡೆಯುವುದೋ ಹರಿತವಾದ ಕತ್ತಿಯಿಂದ ನಿನನು ಇರಿದು ಬೀಳಿಸುವುದೋ ಆಗುವ ಮುನ ನೀನು ಜಾಗ ಖಾಲಿ ಮಾಡುವುದು ಒಳ್ಳೇದು."





ಅಗಲ ಕಿರಿದಾದ ಕಿಟಿಕಿಯಲ್ಲಿ ಮಂಜು ಕರಗಿ ಹರಿದಿದ್ದ ಗಾಜಿಗೆ ಮುಖವೊತ್ತಿ ನಿಂತಿದ್ದ ಗೆಕ್ಕ್ ಈ ಮಾತುಗಳನು ಮೂಗಿನಲ್ಲಿ ಆಡಿದ್ದ. ಅವನಿಗೆ ಹೆದರಿಕೆಯೂ ಕುತೂಹಲವೂ ಆಯಿತು.

ಆದರೆ ಆ ಕ್ಷಣದಲ್ಲಿ ಬಹಳ ವೇಗವಾಗಿ ಚಲಿಸುತ್ತಿದ್ದ ಮೋಡಗಳ ಹಿಂದಿನಿಂದ ಚಂದ್ರಬಿಂಬವು ಹೊರಬಂತು. ಕರಿನೀಲಿ ಬಣ್ಣ ಹೊಂದಿದ್ದ ಹಿಮದ ರಾಶಿಗಳು ಬಿಳಿಬಣ್ಣ ತಳೆದುವು. ಕರಡಿ ಎಂದು ಭಾವಿಸಿದ ವಸ್ತುವು ಕರಡಿ ಅಲ್ಲವೆಂದು ಗೆಕ್ಕನನಿಗೆ ಸುಸ್ಪಷ್ಟವಾಯಿತು. ಕಟ್ಟು ಕಳಚಿದ್ದ ಅವರ ಕುದುರೆ ಹಿಮಗಾಡಿಗೆ ಸುತ್ತಲೂ ನಡೆದು ಅದರಲ್ಲಿದ್ದ ಒಣಹುಲ್ಲನು ಕಚ್ಚಿ ತಿನುತ್ತಿತ್ತು.

ಗೆಕ್ಕನಿಗೆ ನಿರಾಶೆಯಾಯಿತು. ಅವನು ಪುನಃ ಕಂಬಳಿಯೊಳಗೆ ನುಸುಳಿಕೊಂಡ. ಅವನ ಮನಸ್ಸಿನಲ್ಲಿ ಅಹಿತಕರವಾದ ಆಲೋಚನೆಗಳು ಇದ್ದುದರಿಂದ ಅವನಿಗೆ ಅಹಿತಕಾರಿಯಾದ ಕನಸು ಬಿತ್ತು.

ವಿಚಿತ್ರವಾದೊಂದು ಕನಸು ಕಂಡ
ಅದನು ಕಂಡು ಗೆಕ್ಕ ಹೆದರಿ ನಡುಗಿದ.
ನರಭಕ್ಷಕನಾದೊಬ್ಬ ನೀಚ ರಕ್ಕಸ
ಸುಟ್ಟು ಹಾಕಿಬಿಡುವ ಬೆಂಕಿಯುಗುಳುತ್ತ
ಉಕ್ಕಿನ ಮುಷ್ಠಿಗಳೆರಡನೂ ಬೀಸಿ ಬೀಸಿ
ಹಲ್ಕಿಸಿಯುತ್ತಾ ನಿಂತಿದ್ದಾನಲ್ಲಿ
ಧಗಧಗನುರಿಯುವ ಬೆಂಕಿಯ ಸರಿಸಿ
ಸಾಲು ಸಾಲು ಸೈನಿಕರು ಬಂದರು
ಹೆಜ್ಜೆಯ ಮೇಲೆ ಹೆಜ್ಜೆ ಮಂಜಲಿ ಏರಿ
ಸಾನಿ ಧ್ವಜವನು ಹಾರಿಸಿಕೊಂಡು.



“ಹೇಯ್, ನಿಲ್ಲಿ !” ಗೆಕ್ಕ್ ಅವರನುದ್ದೇಶಿಸಿ ಕೂಗಿದ. “ನೀವು ತಪ್ಪಾದ ದಾರಿಯಲ್ಲಿ ಸಾಗುತ್ತಿದ್ದೀರಿ ! ಈ ದಾರಿಯಲ್ಲಿ ಬರುವಂತಿಲ್ಲ !”

ಆದರೆ ಯಾರೂ ನಿಲ್ಲಲಿಲ್ಲ. ಗೆಕ್ಕ್ ಹೇಳಿದ್ದನು ಯಾರೂ ಗಮನಿಸಲಿಲ್ಲ. ಅವನು ಕ್ರುದ್ಧನಾಗಿ ಚುಕ್ಕನ ಪೆಟ್ಟಿಗೆಯಲ್ಲಿ ಜೋಪಾನವಿರಿಸಿದ್ದ ತಗಡಿನ ತುತ್ತೂರಿ ತೆಗೆದು ಜೋರಾಗಿ ಊದಿದ. ಆಲೋಚನೆಯಲ್ಲಿ ಮುಳುಗಿದ ಕವಚಿತ ವಾಹನದ ಕಮಾಂಡರ್ ಒಮ್ಮೆಲೇ ತಲೆಯೆತ್ತಿ ನೋಡಿದ. ಆಜ್ಞಾರೂಪದಲ್ಲಿ ಆತ ಕೈ ಬೀಸಿದ. ಭೀಕರವಾದ ಆತನ ದೊಡ್ಡ ತೋಫುಗಳು ಏಕಕಾಲದಲ್ಲಿ ಗರ್ಜಿಸಿದುವು.

“ಭೇಷ್” ಗೆಕ್ಕ್ ಸಂತೋಷದಿಂದ ಕೂಗಾಡಿದ. “ಅವರಿಗೆ ಇನಷ್ಟು ಬೀಳಲಿ! ಒಂದು ಸಾಲದು!”

***

ತನಿಬ್ಬರು ಪುತ್ರರು ಹೊರಳಾಡಿ ಹೊಡಚಾಡಿದ್ದರಿಂದ ಅಮ್ಮ ಎಚ್ಚರಗೊಂಡಳು.

ಆಕೆ ಚುಕ್ಕನಿಗೆದುರಾಗಿ ಹೊರಳಿದಳು. ಗಟ್ಟಿಮುಟ್ಟಾಗಿ ಹರಿತವಿದ್ದ ಏನೋ



ಒಂದು ಅವಳ ಕೈಗೆ ತಾಗಿತು. ಅವಳು ಮುಟ್ಟಿ ನೋಡಿ ಅದನು ಹೊರಗೆ ಎಳೆದು ತೆಗೆದಳು. ಅದು ಉರುಳಿನ ಸ್ಪ್ರಿಂಗ್. ಛಲಗಾರ ಚುಕ್ಕ ಅದನು ಹಿಡಿದುಕೊಂಡೇ ಮಲಗಿದ್ದ.

ಅವಳು ಅದನು ಹಾಸಿಗೆಯ ಹಿಂದಕ್ಕೆ ಹಾಕಿದಳು. ಅನಂತರ ತಿಂಗಳ ಬೆಳಕಲ್ಲಿ ಅವಳು ಗೆಕ್ಕನ ಮುಖ ನೋಡಿದಳು. ಅವನಿಗೆ ಕೆಟ್ಟ ಕನಸು ಬೀಳುತ್ತಿದೆಯೆಂದು ಅವಳಿಗೆ ಗೊತ್ತಾಯಿತು.

ಕನಸು ಒಂದು ಸ್ಪ್ರಿಂಗ್ ಅಲ್ಲವಲ್ಲ. ಅದನು ದೂರಕ್ಕೆಸೆಯಲು ಸಾಧ್ಯವಿಲ್ಲ. ಆದರೆ ಅದನು ಊದಿ ದೂರಮಾಡಬಹುದು. ಆದುದರಿಂದ ಆಕೆ ಅವನನು ಹೊರಳಿಸಿ ಮಲಗಿಸಿ ಮೆಲ್ಲನೆ ಅಲುಗಾಡಿಸುತ್ತ ಬಿಸಿಲು ತಾಗಿ ಕಪ್ಪೇರಿದ ಆ ಹಣೆಗೆ ಊದಿದಳು.

ಸ್ವಲ್ಪ ಹೊತ್ತಿನಲ್ಲೇ ಗೆಕ್ಕ್ ತುಟಿಯಲುಗಿಸಿದ ಮತ್ತು ಮುಗುಳಕ್ಕ. ಅವನ ಕೆಟ್ಟಕನಸು ದೂರವಾಯಿತು ಎಂದು ಅದರ ಅರ್ಥ.

ಬಳಿಕ ಅವಳು ಹಾಸಿಗೆಯಿಂದ ಮೇಲೆದ್ದು ಕಾಲುಚೀಲ ಧರಿಸಿದ್ದ ಕಾಲುಗಳಿಂದ ನಡೆಯುತ್ತ ಕಿಟಿಕಿಯ ಹತ್ತಿರ ಹೋದಳು.

ಇನೂ ಬೆಳಕು ಹರಿದಿರಲಿಲ್ಲ. ಆಗಸ ತುಂಬ ನಕ್ಷತ್ರಗಳು ಮಿನುಗುತ್ತಿದ್ದುವು. ಅವುಗಳಲ್ಲಿ ಕೆಲವು ತುಂಬಾ ದೂರದಲ್ಲಿ ಮಿನುಗುತ್ತಿದ್ದುವು. ಇನು ಕೆಲವು ತಿ ೈಗಾದ ನೇರ ಮೇಲ್ಭಾಗದಲ್ಲಿ ತೂಗಾಡಿಕೊಂಡಂತಿದ್ದುವು.

ಅದ್ಭುತವೆಂದೇ ಹೇಳಬೇಕು! ಪುಟ್ಟ ಗೆಕ್ಕ ಕುಳಿತಿದ್ದ ಜಾಗದಲ್ಲಿ ಕುಳಿತಾಗ ಅವನ ಮನದಲ್ಲಿ ದಾಟಿಹೋದ ಅವೇ ಆಲೋಚನೆಗಳು ಅವಳಲ್ಲೂ ಮೂಡಿದುವು. ಸಾಹಿಸಿಯಾದ ತನ ಗಂಡ ಬಂದು ತಲಪಿದ ಈ ಜಾಗಕ್ಕಿಂತಲೂ ದೂರದಲ್ಲಿ ಲೋಕದ ಹೆಚ್ಚು ಸ್ಥಳಗಳು ಇರುವುದು ಅಸಾಧ್ಯ. ಕಂಡಿತ.

***



ಮರುದಿನವಿಡೀ ಅವರು ಕಾಡುಗಳ, ಗುಡ್ಡಗಳ ಮೇಲೆ ಪ್ರಯಾಣ ಮಾಡಿದರು. ಗುಡ್ಡ ಏರುವಾಗ ಗಾಡಿಯವನು ಕೆಳಗಿಳಿದು ಮಂಜಿನ ಮೇಲೆಯೇ ನಡೆದು ಬರುತ್ತಿದ್ದ. ಅದಕ್ಕೆ ವಿಪರೀತವಾಗಿ ಇಳಿಜಾರುಗಳಲ್ಲಿ ಅವರ ಗಾಡಿ ಬಹಳ ವೇಗವಾಗಿ ಓಡುತ್ತಿತ್ತು. ತಮ್ಮ ಹಿಮಗಾಡಿಯೂ ಕುದುರೆಗಳೂ ಎಲ್ಲವೂ ದಿಗಂತಗಳಿಂದೇನಾದರೂ ಮೂಡಿ ಬಂದುವುಗಳೋ ಎಂದು ಚುಕ್ಕಗೆಕ್ಕರಿಗೆ ತೋರಿತು.

ಕೊನೆಗೆ, ಮಧ್ಯಾಹಾನಂತರ – ಪ್ರಯಾಣಿಕರೂ ಕುದುರೆಗಳೂ ಆಗ ಒಂದೇ ತೆರನಾಗಿ ಬಳಲಿದ್ದುವು – ಗಾಡಿಯವನೆಂದ :

"ತಲುಪಿಬಿಟ್ಟೆವು! ಅದೋ ಕಾಣುತ್ತದಲ್ಲ – ಅಲ್ಲಿ ಒಂದು ತಿರುವು ಇದೆ. ಅದರ ಆಚೆಗಿರುವ ಮೈದಾನದಲ್ಲಿದೆ ನಮ್ಮ ತಂಗುದಾಣ."

ಸಂತಸದಿಂದ ಚೀರಿಡುತ್ತಾ ಚುಕ್ಕಗೆಕ್ಕರು ನೆಗೆದೆದ್ದರು. ಅದೇ ಹೊತ್ತಿಗೆ ಗಾಡಿ ಚಲಿಸಿದ್ದೂ ಅವರಿಬ್ಬರೂ ಬೈಹುಲ್ಲಿಗೆ ಉರುಳಿದ್ದೂ ಸರಿಹೋಯಿತು.



ಮುಗುಳಗುತ್ತಾ ಅಮ್ಮ ಕೂದಲುಟೊಪ್ಪಿಯ ಮೇಲೆ ಕಟ್ಟಿದ್ದ ಕಂಬಳಿಹೊದಿಕೆಯನು ಹಿಂದಕ್ಕೆ ಹಾಕಿದಳು. ತಲುಪಿಬಿಟ್ಟೆವು! ಗಾಡಿ ರಭಸದಿಂದ ತಿರುಗಿ ಮೂರು ಸಣ್ಣಸಣ್ಣ ಮನೆಗಳ ಮುಂದೆ ಬಂದು ನಿಂತಿತು. ಕಾಡಲ್ಲಿ ಗಾಳಿಯ ಹೊಡೆತ ಬೀಳದ ಒಂದು ಸಣ್ಣ ಬಿಡುಜಾಗದಲ್ಲಿದ್ದುವು ಆ ಕಿರುಮನೆಗಳು.

ಆಶ್ಚರ್ಯ! ಒಂದು ನಾಯಿ ಕೂಡ ಬೊಗಳಲಿಲ್ಲ. ಒಂದೇ ಒಂದು ಮನುಷ್ಯಜೀವ ಅಲ್ಲೆಲ್ಲೂ ಕಂಡುಬರಲಿಲ್ಲ. ಹೊಗೆ ಕೊಳವೆಗಳಿಂದ ಹೊಗೆ ಮೇಲೇಳುತ್ತಿರಲಿಲ್ಲ. ದಾರಿಗಳಲ್ಲೆಲ್ಲ ದಟ್ಟವಾಗಿ ಹಿಮ ಬಿದ್ದು ಮುಚ್ಚಿಹೋಗಿತ್ತು. ಚಳಿಗಾಲದ ಶ್ಮಶಾನಮೌನ ಅಲ್ಲಿ ನೆಲೆಮಾಡಿತ್ತು. ಮರದ ಕೊಂಬೆಗಳಲ್ಲೆಲ್ಲ ಹಕ್ಕಿಗಳು ಯಾವುದೇ ಆತಂಕವಿಲ್ಲದೆ ನಡೆದಾಡುತ್ತಿದ್ದುವು. ಕಪ್ಪುಬಿಳಿ ಮಿಶ್ರಿತವಾದ ಒಂದಷ್ಟು ಹಕ್ಕಿಗಳಷ್ಟೆ ಅಲ್ಲಿ ಜೀವಜಾಲವೆನಬಹುದಾದುವು ಕಾಣಬರುತ್ತಿದ್ದುದು.



[illegible]

[illegible]

“ಜಾಗ ಇದೇ ಎನುವುದು ಖಾತ್ರಿಯೋ ?” ಗಾಬರಿಯ ದನಿಯಲ್ಲಿ ಅಮ್ಮ ಗಾಡಿಕಾರನನು ಕೇಳಿದಳು.

“ಜಾಗ ಇದೇ” ಆತನೆಂದ. “ಆ ಕಾಣುವ ಮೂರು ಮನೆಗಳು ಸೇರಿ ಭೂಗರ್ಭ ಸಂಶೋಧನ ಕೇಂದ್ರ ನಂಬರ್ ಮೂರು. ಅಲ್ಲೊಂದು ಕುತ್ತಿಪೊದರಿನಲ್ಲಿ ಅದರ ಬೋರ್ಡು ಕಾಣುತ್ತಿಲ್ಲವೇ ? ಅಥವಾ ನೀವು ಹೋಗಬೇಕಾಗಿದ್ದುದು ಕೇಂದ್ರ ಏಳಕ್ಕೆಯೋ ? ಅದಾದರೆ ಇನೊಂದು ದಾರಿಯಲ್ಲಿ ಇನೂರು ಕಿಲೋಮೀಟರ್‌ನಷ್ಟು ಹೋಗಬೇಕಾಗುತ್ತದೆ.”

“ಅಲ್ಲಲ್ಲ” ಬೋರ್ಡನೇ ದುರುಗುಟ್ಟಿ ನೋಡುತ್ತ ಅಮ್ಮ ಹೇಳಿದಳು. “ನಾವು ಬರಬೇಕಾದ್ದು ಇಲ್ಲಿಗೇ. ಆದರೆ ಬಾಗಿಲುಗಳೆಲ್ಲ ಬೀಗ ತಗಲಿಸಿಕೊಂಡಿವೆ. ವರಾಂಡಗಳಲ್ಲಿ ಹಿಮ ತುಂಬಿದೆ. ಅವರೆಲ್ಲ ಎಲ್ಲಿ ಹೋದರು ?”





"ಅದು ನನಗೆ ಗೊತ್ತಿಲ್ಲ" ಗಾಡಿಯವನು ಅಚ್ಚರಿಯಲ್ಲೇ ಹೇಳಿದ. ಕಳೆದ ವಾರವಷ್ಟೆ ನಾವು ಇಲ್ಲಿಗೆ ಸಾಮಾನುಗಳನು ತಂದುಕೊಟ್ಟೆವು. ಒಂದಷ್ಟು ಗೋಧಿಹುಡಿ, ಈರುಳ್ಳಿ, ಆಲೂಗಡ್ಡೆಗಳನು. ಆಗ ಜನರೆಲ್ಲ ಇಲ್ಲಿದ್ದರು. ಮುಖ್ಯಸ್ಥನನೂ ಕಾವಲುಗಾರನನೂ ಬಿಟ್ಟು ಎಂಟು ಜನ. ಇದೆಂಥ ಡೊಂಬರಾಟ! ಅವರನೆಲ್ಲ ಸೀಳುನಾಯಿಗಳು ತಿಂದುಹಾಕುವುದು ಸಾಧ್ಯವಿಲ್ಲ. ನೀವಿಲ್ಲಿ ನಿಲ್ಲಿರಿ. ನಾನು ಕಾವಲುಗಾರನ ಮನೆಗೆ ಹೋಗಿ ನೋಡಿ ಬರುವೆ."

ಆಡಿನ ತೊಗಲಿನ ಕಂಬಳಿ ಬದಲಾಯಿಸಿ ಗಾಡಿಯವನು ತುಂಬ ದೂರವಿದ್ದ ಗುಡಿಸಲಿಗೆ ಹಿಮದ ಮೇಲೆಯೇ ನಡೆದುಹೋದ. ಸ್ವಲ್ಪ ಹೊತ್ತಿನಲ್ಲೇ ಆತ ಮರಳಿಬಂದ.

"ಅಲ್ಲಿ ಯಾರೂ ಇಲ್ಲ. ಆದರೆ ಒಲೆ ಈಗಲೂ ಬಿಸಿಯಿದೆ. ಕಾವಲುಗಾರ ಹತ್ತಿರವೇ ಎಲ್ಲೋ ಇರಬಹುದು. ಒಂದು ವೇಳೆ ಆತ ಬೇಟೆಗೆ ಹೋಗಿರಲೂ ಸಾಕು. ರಾತ್ರೆಯಾಗುವುದರ ಮುಂಚೆ ಆತ ಹಿಂತಿರುಗಿ ಬಂದು ನಿಮಗೆ ಬೇಕಾದ್ದನೆಲ್ಲ ಹೇಳಿಯಾನು."

"ಅವನು ಏನನು ಹೇಳುವುದು ?" ಅಮ್ಮ ಎಂದಳು. "ಜನರು ಇಲ್ಲಿಂದ ಹೋಗಿ ತುಂಬಾ ದಿನಗಳಾದುವೆಂದು ನನಗೇ ಕಾಣಿಸುತ್ತಿದೆಯಲ್ಲ."

"ಆತ ಏನು ಹೇಳಬಹುದೆಂಬುದನು ನಾನು ಹೇಳಲಾರೆ" ಗಾಡಿಯವನೆಂದ. "ಆದರೆ ಕಾವಲುಗಾರನಾಗಿ ರುವುದರಿಂದ ಆತ ಏನಾದರೂ ಹೇಳಬಲ್ಲ."

ಅವರು ತುಂಬ ಆತಂಕಗೊಂಡು ಕಾವಲುಗಾರನ ಗುಡಿಸಲಿನ ವರಾಂಡದ ವರೆಗೆ ಗಾಡಿಯನೇರಿ ಹೋದರು. ಅಲ್ಲಿಂದ ಕಾಡಿನ ಒಳಗೆ ಹೋಗುತ್ತಿದ್ದ ಒಂದು ಒಳದಾರಿ ಕಂಡಿತು.

ಗುದ್ದಲಿಗಳು, ಹಿಡಿಸೂಡಿಗಳು, ಕೊಡಲಿಗಳು, ದೊಣ್ಣೆಗಳು – ಇವೆಲ್ಲವನು ಕಬ್ಬಿಣದ ಒಂದು ಕೊಕ್ಕೆಯಲ್ಲಿ ತೂಗಾಡಿಸಲಾಗಿದ್ದ ಒಂದು ಮರಗಟ್ಟಿದ



ಕರಡಿತೊಗಲನು ದಾಟಿ ಅವರು ಬಾಗಿಲು ತೆರೆದು ಒಳಹೋದರು. ಎಲ್ಲರ ಹಿಂದಿನಿಂದ ಗಾಡಿಯವನು ಮೂಟೆಗಳನೆಲ್ಲ ತೆಗೆದುಕೊಂಡು ಬಂದ.

ಗುಡಿಸಲ ಒಳಗೆ ಬೆಚ್ಚಗಿತ್ತು.

ಕುದುರೆಗಳಿಗೆ ತಿನಿಸು ಹಾಕುವುದಕ್ಕಾಗಿ ಗಾಡಿಯವನು ಹೊರಗೆ ಹೋದ. ಹೆದರಿ ಕಂಗಾಲಾಗಿದ್ದ ಮಕ್ಕಳ ಕೋಟನು ಅಮ್ಮ ಮೌನವಾಗಿ ಬಿಚ್ಚಿತೆಗೆದಳು.

"ಇಷ್ಟು ದೂರ ಬಂದು ನೋಡಿದರೆ ಅಪ್ಪ ಇಲ್ಲಿಲ್ಲ!"

ಸೋತು ಬೆಂಚೊಂದರಲ್ಲಿ ಕುಳಿತ ಅಮ್ಮ ತಲೆಹುಣ್ಣಾಗುವಷ್ಟು ಯೋಚಿಸಿದಳು. ಏನಾಯಿತು? ವಸತಿ ಖಾಲಿಯಾಗಿರುವುದು ಯಾಕಿರಬಹುದು? ಇನು ಮಾಡುವುದೇನು? ಹಿಂತಿರುಗಿ ಹೋಗುವುದೇ? ಆದರೆ ಗಾಡಿಯವನಿಗೆ ಈ ಕಡೆಗೆ ಬರಲು ಕೊಡಬೇಕಾದ ಹಣ ಮಾತ್ರ ಕೈಯಲ್ಲಿದೆ. ಹಾಗಾದರೆ ಕಾವಲುಗಾರನಿಗಾಗಿ ಕಾಯುತ್ತ ನಿಲ್ಲಬೇಕಾಗಿ ಬಂತು. ಆದರೆ ಗಾಡಿಯವನು ಮೂರು ತಾಸುಗಳ ಒಳಗೆ ಹಿಂತಿರುಗುತ್ತಾನೆ. ಕಾವಲಿನವನು ಅಷ್ಟರೊಳಗೆ ಬಾರದಿದ್ದರೆ? ಅತ್ಯಂತ ಸಮೀಪದ ರೈಲ್ವೆ ನಿಲ್ದಾಣವಾಗಲಿ ತಂತಿ ಆಫೀಸಾಗಲಿ ಇರುವುದು ನೂರು ಕಿಲೋಮೀಟರ್ ದೂರ.



ಗಾಡಿಯವನು ಒಳದಾಟಿ ಬಂದ. ಬಿಡಾರದ ಸುತ್ತು ಕಣ್ಣೋಡಿಸುತ್ತ ವಾಸನೆ ಹಿಡಿದು ಒಲೆಯ ಸಮೀಪ ಹೋಗಿ ಒಳಗಡೆ ನೋಡಿದ.

"ಕಾವಲುಗಾರ ರಾತ್ರೆಯಾಗುವುದರೊಳಗೆ ಬಂದೇ ಬರುತ್ತಾನೆ" ಅವನು ಇವರಿಗೆ ಧೈರ್ಯವಿತ್ತ. "ಒಂದು ಪಾತ್ರೆ ತುಂಬ ಮೊಟ್ಟೆಕೋಸಿನ ಸೂಪಿರುವುದನು ನೋಡಿದಿರಾ ? ಒಂದು ದೀರ್ಘ ಪ್ರಯಾಣ ಹೋಗುವವನಾದರೆ ಅವನು ಈ ಸೂಪನು ತಂಪಾದ ಜಾಗದಲ್ಲಿ ಇಡುತ್ತಿದ್ದ. ಏನೇ ಇರಲಿ. ಆಲೋಚನೆ ಮಾಡಿ ಹೇಗೆ ಬೇಕೋ ಹಾಗೆ ಮಾಡಿ." ಆತ ಮುಂದುವರಿಸಿ ಹೇಳಿದ. "ಸಂಗತಿ ಹೀಗಾಗಿರುವುದರಿಂದ ನಾನು ನಿಮ್ಮನು ಪುಕ್ಕಟೆಯಾಗಿಯೇ ಮರಳಿ ಕರೆದುಕೊಂಡು ಹೋಗಿ ಬಿಡುತ್ತೇನೆ. ನಾನು ಕಲ್ಲು ಮನಸ್ಸಿನವನಲ್ಲ."

"ಬೇಡ" ಅಮ್ಮ ಹೇಳಿದಳು. "ನಾವು ಪುನಃ ಸ್ಟೇಷನ್‌ಗೆ ಹೋಗುವುದರಿಂದ ಯಾವ ಉಪಯೋಗವೂ ಇಲ್ಲ."

ಆಕೆ ಪುನಃ ನೀರು ಕುದಿಯಲು ಇಟ್ಟಳು. ಸಾಸೇಜ್ ಬಿಸಿ ಮಾಡಿದಳು. ಎಲ್ಲರೂ ಊಟಮಾಡಿದರು. ಅಮ್ಮ ಸಾಮಾನುಗಳನೆಲ್ಲ ಹೊರತೆಗೆಯುತ್ತಿದ್ದಾಗ ಚುಕ್ಕಗೆಕ್ಕರು ಒಲೆಯ ಮೇಲ್ಭಾಗದಲ್ಲಿ ಬೆಚ್ಚಗೆ ಇದ್ದ ತಟ್ಟಿಗೆ ನೆಗೆದು ಏರಿದರು. ಬರ್ಚ್ ಮರದ ಎಲೆಕಡ್ಡಿಗಳ, ಬೆಚ್ಚಗಿದ್ದ ಆಡಿನ ಚರ್ಮದ, ಪೈನ್ ಮರದ ಸೀಳುಗಳ ಮಿಶ್ರವಾಸನೆ ಅಲ್ಲಿ ತಂಗಿ ನಿಂತಿತ್ತು. ಅಮ್ಮ ಅಸ್ವಸ್ಥತೆಯಿಂದ ಮೂಕಳಾಗಿ ಇದ್ದುದರಿಂದ ಚುಕ್ಕಗೆಕ್ಕರು ಮೌನತಾಳಿದ್ದರು. ಆದರೆ ತುಂಬ ಹೊತ್ತು ಹಾಗೆ ಸುಮ್ಮನೆ ಕುಳಿತುಕೊಳ್ಳಲು ಅಸಾಧ್ಯವಾದುದರಿಂದಲೂ ಬೇರೇನೂ ಮಾಡಲು ಇಲ್ಲದುದರಿಂದಲೂ ಚುಕ್ಕಗೆಕ್ಕರು ಗಾಢ ನಿದ್ರಾವಶರಾದರು.

ಗಾಡಿಯವನು ಹೋದುದಾಗಲಿ ಅಮ್ಮ ತಟ್ಟಿನ ಮೇಲೇರಿ ಹತ್ತಿರ ಬಂದು ಮಲಗಿದ್ದಾಗಲಿ ಅವರಿಗೆ ಗೊತ್ತೇ ಆಗಲಿಲ್ಲ. ಗುಡಿಸಲೊಳಗೆ ದಟ್ಟ ಕತ್ತಲು ಆವರಿಸಿಕೊಂಡ ಬಳಿಕವೇ ಅವರಿಗೆ ಎಚ್ಚರವಾಯಿತು. ವರಾಂಡದಲ್ಲಿ ಹೆಜ್ಜೆಯ ಸದ್ದು ಆ ಮೂವರಿಗೆ ಕೇಳಿಸಿದ್ದು ಮತ್ತು ಅವರು ಎಚ್ಚರವಾದುದು

ಒಮ್ಮೆಲೆ. ಒಂದು ದೊಡ್ಡ ಸದ್ದಿನೊಂದಿಗೆ ಏನೋ ಬಾಗಿಲ ಬಳಿ ಬಿತ್ತು. ಒಂದು ಗುದ್ದಲಿಯಾಗಿರಬಹುದು. ಕಾವಲುಗಾರ ಕೈಯಲ್ಲೊಂದು ಲಾಟೀನು ಮತ್ತ ಜಟೆಕೂದಲಿನ ಒಂದು ದೊಡ್ಡ ನಾಯಿಯ ಸಮೇತ ಬಾಗಿಲು ತೆರೆದು ಒಳಬಂದ.

ಆತ ಹೆಗಲಿನಿಂದ ಕೋವಿಯನು ಸರಿಸಿ ತೆಗೆದ. ಗುಂಡಿಟ್ಟು ಕೊಂದಿದ್ದ ಒಂದು ಮೊಲವನು ಬೆಂಚಿನಮೇಲೆ ಹಾಕಿದ. ಲಾಟೀನು ಎತ್ತಿ ಒಲೆಯ ಮೇಲಕ್ಕೆ ನೋಡುತ್ತ ಅವನು ಕೇಳಿದ –

“ನೀವು ಯಾರು ?”

“ಭೂಗರ್ಭ ಸಂಶೋಧನ ಕೇಂದ್ರ ಮುಖ್ಯಸ್ಥರಾದ ಸೊರೋಗ್‌ರ ಹೆಂಡತಿ, ನಾನು” ತಟ್ಟಿನಿಂದ ಕೆಳಗಿಳಿಯುತ್ತ ಅಮ್ಮ ಹೇಳಿದಳು. “ಇವರು ಅವರ ಮಕ್ಕಳು.”

ಆತ ಚುಕ್ಕಗೆಕ್ಕರ ಮುಖಗಳತ್ತ ಬೆಳಕು ಹಾಯಿಸಿದ.

“ಸರಿ. ಅಪ್ಪನದೇ ಪ್ರತಿರೂಪಗಳು. ಅದರಲ್ಲೂ ಈ ಪೋಕಿರಿ ಹುಡುಗ” ಆತ ಚುಕ್ಕನತ್ತ ಬೆರಳು ತೋರುತ್ತ ಹೇಳಿದ. ಚುಕ್ಕ ಗೆಕ್ಕರಿಗೆ ಆತಂಕವಾಯಿತು. ತನನು ಪೋಕಿರಿಹುಡುಗ ಎಂದು ಕರೆದುದು ಚುಕ್ಕನ ಆತಂಕಕ್ಕೆ ಕಾರಣವಾಗಿತ್ತು.

“ನೀವು ಯಾಕೆ ಹೀಗೆ ಅವಸರಪಟ್ಟು ಬಂದಿರಿ ?” ಅಮ್ಮನನು ನೋಡುತ್ತ ಕಾವಲುಗಾರ ಕೇಳಿದ. “ಬರುವುದು ಬೇಡವೆಂದು ನಾವು ಹೇಳಿದ್ದಲ್ಲವೆ ?”

“ನೀವು ಏನು ಹೇಳುತ್ತಿದ್ದೀರೆಂದು ನನಗೆ ಗೊತ್ತಾಗುತ್ತಿಲ್ಲ. ನಾವು ಬರುವುದು ಬೇಡ ಎಂದು ಹೇಳಿದವರು ಯಾರು?”

“ಹೇಳಿದ್ದು ನಿಮ್ಮ ಯಜಮಾನರು. ಸೊರೋಗ್‌ರ ತಂತಿ ಸಂದೇಶವನು ಒಯ್ದು ತಲುಪಿಸಿದ್ದು ನಾನೇ. ಅದರಲ್ಲಿ ಸ್ಪಷ್ಟವಾಗಿ ತಿಳಿಸಿತ್ತು : ಬರುವುದನು ಎರಡುವಾರ ಮುಂದೆ ಹಾಕಿ. ನಮ್ಮ ತಂಡವು ತುರ್ತಾಗಿ ತೈಗಾಕ್ಕೆ ತೆರಳುತ್ತ ಇದೆ. ‘ಬರುವಿಕೆಯನು ಮುಂದೆ ಹಾಕಿ’ ಎನುವುದು ಅದರ ಅರ್ಥ. ಆಜ್ಞೆಯನು

ನೀವು ಪಾಲಿಸುತ್ತಿಲ್ಲ."

"ನೀವು ಯಾವ ತಂತಿಯ ವಿಷಯವನು ಹೇಳುತ್ತಿದ್ದೀರಿ?" ಅಮ್ಮ ಕೇಳಿದಳು. "ನಮಗೆ ಯಾವ ತಂತಿ ಸಂದೇಶ ಕೂಡ ಸಿಕ್ಕಿಲ್ಲ" ತಾನು ಹೇಳಿದುದರ ದೃಢೀಕರಣಕ್ಕಾಗಿ ಅವಳು ಚುಕ್ಕಗೆಕ್ಕರ ಮುಖಗಳತ್ತ ನೋಡಿದಳು.

ಆದರೆ ಮಕ್ಕಳಿಬ್ಬರೂ ಗಾಬರಿಗೊಂಡು ಪರಸ್ಪರ ಮುಖ ನೋಡುತ್ತ ತ ಟ್ಟಿನ ಹಿಂಭಾಗಕ್ಕೆ ಅವಸರವಸರವಾಗಿ ಸರಿದುಕೊಳ್ಳುತ್ತಿದ್ದುದನು ಆಕೆ ಕಂಡಳು.

"ಮಕ್ಕಳೇ," ಮಕ್ಕಳನು ಸಂಶಯದಿಂದ ನೋಡುತ್ತ ಅಮ್ಮ ಕೇಳಿದಳು : "ನಾನು ಮನೆಯಲ್ಲಿ ಇಲ್ಲದಿದ್ದಾಗ ಒಂದು ತಂತಿ ಬಂದಿತ್ತೇ ?"

ತಟ್ಟಿನ ಮೇಲೆ ಮರದ ಒಣಗಿದ ಕಿರುರೆಂಬೆಗಳು ಮತ್ತು ಕಿರುಪುಳ್ಳೆಗಳು ಸದ್ದು ಮಾಡಿದವು. ಆದರೆ ಉತ್ತರವಿಲ್ಲ. "ನಾನು ಕೇಳಿದ್ದಕ್ಕೆ ತ್ರಾಸಕೊಡದೆ ಉತ್ತರ ಕೊಡಿ !" ಅಮ್ಮ ಜೋರುದನಿಯಲ್ಲಿ ಹೇಳಿದಳು. "ನಾನು ಹೊರಗೆ





ಹೋಗಿ ಬಂದಾಗ ನಿಮಗೆ ಒಂದು ತಂತಿ ಸಿಕ್ಕಿದ್ದು ಅದನು ನನಗೆ ಕೊಡಲು ಮರೆತು ಹೋಯಿತೇ ?"

ಇನೂ ನಾಲ್ಕಾರು ನಿಮಿಷಗಳು ಸರಿದುಹೋದುವು. ಒಮ್ಮೆಲೆ ತಟ್ಟಿನ ಕಡೆಯಿಂದ ಏರುದನಿಯಲ್ಲಿ ಬೊಬ್ಬೆ ಎದ್ದಿತು.

ಚುಕ್ಕನ ಸದ್ದು ಇಳಿದನಿಯಲ್ಲಿದ್ದರೆ ಗೆಕ್ಕನದು ಏರುದನಿಯಾಗಿತ್ತು. "ಕೆಟ್ಟ ಮಕ್ಕಳು!" ಅಮ್ಮ ಎಂದಳು. "ನೀವು ನನನು ಕೊಲ್ಲದೆ ಬಿಡುವವರಲ್ಲ. ಬೊಬ್ಬೆ ನಿಲ್ಲಿಸಿ ನಡೆದದ್ದು ಏನೆಂದು ಹೇಳಿ."

ಕೊಲ್ಲದೆ ಬಿಡುವವರಲ್ಲ ಎಂದುದನು ಕೇಳಿದಾಗ ಚುಕ್ಕಗೆಕ್ಕರ ಅಳು ಇನಷ್ಟು ತಾರಕಕ್ಕೇರಿತು. ತಮ್ಮ ವಿಚಾರದ ವಿಷಾದ ವೃತ್ತಾಂತವನು ಅವರಿಂದ ಹೇಳಿಸಲು ತುಂಬ ಸಮಯ ಹಿಡಿಯಿತು. ತಪ್ಪನು ಪರಸ್ಪರ ತಲೆಯ ಮೇಲೆ ಹಾಕಲು ಇಬ್ಬರೂ ನಾಚಿಕೆಯಿಲ್ಲದೆ ಸಾಕಷ್ಟು ಯತಿಸದಿರಲಿಲ್ಲ.

ಇಂಥ ಮಕ್ಕಳನು ಮಾಡುವುದೇನು ? ಹೊಡೆಯುವುದೋ ? ಹಿಡಿದು ಜೈಲಿಗೆ ಹಾಕುವುದೋ ? ಕಾಲಿಗೆ ಸಂಕಲೆ ಹಾಕಿ ಕಠಿಣ ಅಧ್ವಾನಕ್ಕೆ ಕಳುಹಿಸುವುದೋ ? ಅಮ್ಮ ಇದಾವುದನೂ ಮಾಡಲಿಲ್ಲ. ಕೆಳಗೆ ಬಂದು ಮೂಗು ಸೀಟಿ ಮುಖ ತೊಳೆಯಲು ಕಟ್ಟುಬ್ಬಸಪಡುತ್ತಾ ಮಕ್ಕಳಿಗೆ ಹೇಳಿದಳು ಅಷ್ಟೆ. ಆ ಬಳಿಕ ತಾನು ಇನು ಏನು ಮಾಡಲಿ ಎಂದು ಕಾವಲುಗಾರನಲ್ಲಿ ಕೇಳಿದಳು.

ಭೂಗರ್ಭ ಸಂಶೋಧನ ತಂಡವು ಒಂದು ತುರ್ತು ಕೆಲಸದ ನಿಮಿತ್ತ ಅಲ್ಕರಾಶ್ ಬೆಟ್ಟದ ಆಚೆ ತಪ್ಪಲಿಗೆ ಹೋಗಿದೆ ಎಂದೂ ಕಡಿಮೆಯೆಂದರೆ ಹತ್ತು ದಿನ ಕಳೆದ ಮೇಲಷ್ಟೆ ಅವರು ಹಿಂತಿರುಗುವವರೆಂದೂ ಕಾವಲುಗಾರ ಹೇಳಿದ.

"ಆದರೆ ನಾವು ಹತ್ತು ದಿವಸ ಕಳೆಯುವುದು ಹೇಗೆ ?" ಅಮ್ಮ ಕೇಳಿದಳು. "ನಾವು ಆಹಾರಪದಾರ್ಥಗಳೇನನೂ ತಂದಿಲ್ಲ."

"ಹೇಗಾದರೂ ಕಳೆಯಲೇ ಬೇಕು" ಕಾವಲುಗಾರನೆಂದ. "ನಾನು ಒಂದಿಷ್ಟು ರೊಟ್ಟಿ ಕೊಡುತ್ತೇನೆ. ಆ ಮೊಲವನೂ ತೆಗೆದುಕೊಳ್ಳಿ. ಚರ್ಮ ಸುಲಿದು ಅಟ್ಟುಕೊಳ್ಳಿ. ನಾನು ನಾಳೆ ಒಂದೆರಡು ದಿನದ ಮಟ್ಟಿಗೆ ತೈಗಾಕ್ಕೆ ಹೋಗಬೇಕಾಗಿದೆ. ಉರುಳು ಇಟ್ಟದ್ದನು ನೋಡಬೇಕಾಗಿದೆ."

"ಅದು ತುಂಬ ಕಷ್ಟ" ಅಮ್ಮ ಎಂದಳು. "ಇಲ್ಲಿ ನಾವು ಮಾತ್ರ ಇರುವುದು ಹೇಗೆ ?" ನಮಗೆ ಈ ಜಾಗದ ಕುರಿತು ಏನೇನೂ ಗೊತ್ತಿಲ್ಲ. ಇಲ್ಲಿ ಕಾಡು ಮತ್ತು ಮೃಗಗಳಲ್ಲದೆ ಬೇರೇನೂ ಇಲ್ಲ..."

"ನಾನು ಒಂದು ಕೋವಿಯನು ನಿಮಗೆ ಕೊಟ್ಟು ಹೋಗುವೆ" ಕಾವಲುಗಾರನೆಂದ. "ಕೊಟ್ಟಿಗೆಯಲ್ಲಿ ಸಾಕಷ್ಟು ಕಟ್ಟಿಗೆಯಿದೆ. ಆ ಗುಡ್ಡದ ಆಚೆಗೆ ಒಂದು ಕಿರುತೊರೆಯಿದೆ. ಇದೋ ಒಂದುಚೀಲ ಗೋಧಿ. ಉಪ್ಪು ಆ ಪಾತ್ರೆಯಲ್ಲಿದೆ. ನಿಮ್ಮ ಯೋಗಕ್ಷೇಮ ನೋಡುತ್ತ ಇರಲು ನನಗೆ ಪುರುಸೊತ್ತ ಇಲ್ಲ, ತಿಳಿಯಿತೇ.. ?"

"ಹೂಂ ! ಒಬ್ಬ ಅಡಾಡಿ ಮನುಷ್ಯ." ಗೆಕ್ಕ ಚುಕ್ಕನಿಗೆ ತಗ್ಗಿದ ಸ್ವರದಲ್ಲಿ ಹೇಳಿದ. "ಬಾ ನಾವು ಆತನೊಡನೆ ನಾಲ್ಕು ಮಾತು ಆಡೋಣ."

"ಬೇಡ" ಚುಕ್ಕನೆಂದ. "ನಾವು ಹಾಗೇನಾದರೂ ಮಾಡಿದರೆ ಆತ ನಮ್ಮನು ಹೊಡೆದು ಇಲ್ಲಿಂದ ಹೊರಹಾಕಿಯಾನು. ಅಪ್ಪ ಬರುವವರೆಗೆ ಕಾಯುವುದೇ ಒಳ್ಳೇದು. ಆಗ ನಾವು ಈತನ ಬಗ್ಗೆ ಎಲ್ಲವನೂ ಹೇಳಿಕೊಡೋಣ."

"ಅಪ್ಪ ಬರುವ ವರೆಗೋ ?" ಅದಕ್ಕೆ ಇನೂ ಎಷ್ಟು ದಿನಗಳು ಕಳೆಯಬೇಕು!?"

ಗೆಕ್ಕ್ ಅಮ್ಮನ ಬಳಿ ಹೋಗಿ ಅವಳ ಮಡಿಲೇರಿ ಕುಳಿತು, ಆ ಮರ್ಯಾದೆಕೆಟ್ಟ ಕಾವಲುಗಾರನನು ಹಗೆ ಚುಕ್ಕಗಿದ್ದ ಕೋಪದಿಂದ ನೋಡಿದ.

ಕಾವಲುಗಾರ ಆಟದ ತೊಗಲಿನ ತನ ಕೋಟು ಕಳಚಿಟ್ಟು ಲಾಟೀನು ಇಟ್ಟಿದ್ದ ಮೇಜಿನ ಬಳಿಗೆ ಹೋದ.

ಆ ಕೋಟಿನ ಹಿಂಭಾಗ ತೋಳೂ ಸೇರಿದಂತೆ ಸೊಂಟದ ವರೆಗೆ ಒಂದು ದೊಡ್ಡ ತುಂಡು ಹರಿದು ಕಿತ್ತು ಹೋಗಿರುವುದು ಆಗಷ್ಟೆ ಗೆಕ್ಕನ ಕಣ್ಣಿಗೆ ಬಿತ್ತು.

"ಮೊಟ್ಟೆಕೋಸು ಸೂಪು ಒಲೆಯಲ್ಲಿದೆ" ಕಾವಲುಗಾರ ಅಮ್ಮನಿಗೆಂದ. "ಚಮಚಗಳೂ ಪಿಂಗಾಣಿ ತಟ್ಟೆಗಳೂ ಆ ಶೆಲ್ಫಿನಲ್ಲಿವೆ. ಕುಳಿತು ಊಟಮಾಡಿರಿ. ನಾನು ಅಷ್ಟರೊಳಗೆ ಈ ಕೋಟನು ಹೊಲಿದುಬಿಡುತ್ತೇನೆ."

"ನೀವು ಈ ಮನೆಯಾತ" ಅಮ್ಮ ಎಂದಳು. "ನೀವು ಆಹಾರವನೆಲ್ಲ ತೆಗೆದು ಸಿದ್ಧಮಾಡಿ. ಆ ಕೋಟು ಇತ್ತ ಕೊಡಿ. ನಾನು ನಿಮಗಿಂತಲೂ ಚೆನಾಗಿ ಹೊಲಿಯಬಲ್ಲೆನೆಂಬುದು ಸತ್ಯ." ಕಾವಲುಗಾರ ತಲೆಯೆತ್ತಿ ಆಕೆಯನು ನೋಡಿದಾಗ ಗೆಕ್ಕನ ಒರಟು ನೋಟವನು ಕಾಣಬೇಕಾಯಿತು.

"ಓಹೋ ! ಬಹಳ ಹಠಗಾರ, ಅಲ್ಲವೇ. ಅದು ನನಗೆ ಗೊತ್ತಾಯಿತು" ಆತ ತನಗೇ ಎಂಬಂತೆ ಹೇಳಿಕೊಂಡ. ತನ ಕೋಟನು ಅವರ ಕೈಗೆ ಕೊಟ್ಟು, ಮೇಲೆದ್ದು ಪಿಂಗಾಣಿ ಪ್ಲೇಟುಗಳನು ತೆಗೆಯಲು ಶೆಲ್ಫ್ ಬಳಿಗೆ ನಡೆದ.

"ಇದು ಇಷ್ಟೊಂದು ಹರಿದುದು ಹೇಗೆ ?" ಹರಿದುದನು ತೋರಿಸುತ್ತಾ ಚುಕ್ಕ್ ಕೇಳಿದ.

"ಒಂದು ಕರಡಿಯೊಂದಿಗೆ ಸಣ್ಣದೊಂದು ಕುಸ್ತಿ ನಡೆಯಿತು. ಅವನು ಒಂದು ಬಾರಿ ಪರಚಿದ್ದು." ಭಾರವಾಗಿದ್ದ ಪಾತ್ರೆಯೊಂದರಲ್ಲಿ ಹಾಕಿದ್ದ ಮೊಟ್ಟೆಕೋಸು ಸೂಪನು ಮೇಜಿನ ಮೇಲೆ ಇಡುತ್ತಾ ಮನಸ್ಸಿಲ್ಲದ ಮನಸ್ಸಿಂದ ಕಾವಲುಗಾರನೆಂದ.

"ನೀನು ಇದನು ಕೇಳಿದೆಯಾ ಗೆಕ್ಕ್ ?" ಕಾವಲುಗಾರ ಕೋಣೆಯಿಂದ ಹೊರಗೆ ಹೋದಾಗ ಚುಕ್ಕ ಕೇಳಿದ. "ಆತ ಕರಡಿಯೊಂದಿಗೆ ಕುಸ್ತಿ ಹಿಡಿದನಂತೆ. ಅದರಿಂದಲೇ ಆತನಿಗೆ ಇವತ್ತು ತುಂಬ ಸಿಟ್ಟು ಅಂತ ಕಾಣುತ್ತದೆ."

ಗೆಕ್ಕ್ ಅದನು ಕೇಳಿದ. ಆದರೆ ಯಾರೇ ಆಗಲಿ – ಒಂದು ಕರಡಿಯೊಂದಿಗೆ ಒಂಟಿಯಾಗಿ ಹೋರಾಡಲು ಸಾಧ್ಯವಿರುವ ವ್ಯಕ್ತಿಯೇ ಆಗಿದ್ದರೂ ಕೂಡ, ತನ ಅಮ್ಮನೊಂದಿಗೆ ಮರ್ಯಾದೆಯಿಲ್ಲದೆ ವರ್ತಿಸುವುದು ಅವನಿಗೆ ಇಷ್ಟವಾಗಲಿಲ್ಲ.

***

ಮರುದಿನ ಬೆಳಗಾದಾಗ ಕಾವಲುಗಾರ ತನ ಜೋಳಿಗೆಯನೂ ಕೋವಿಯನೂ ತೆಗೆದುಕೊಂಡು ಕಾಲಿಗೆ ಜಾರುಹಲಗೆ ಕಟ್ಟಿಕೊಂಡು ತೈಗಾದೊಳಗೆ ಮರೆಯಾದ. ಅವರು ಇನು ಎಲ್ಲ ಸಂಗತಿಗಳನು ತಾವೇ ನಿಭಾಯಿಸಬೇಕು.

ಮೂವರೂ ಸೇರಿ ನೀರಿಗೆ ಹೋದರು. ಗುಡ್ಡದ ಆಚೆಬದಿಗೆ ಮುಂಚಾಚಿ ನಿಂತಿರುವ ಒಂದು ಬಂಡೆಯಿಂದ ಒಂದು ಪುಟ್ಟ ತೊರೆ ಮಂಜುಗಡ್ಡೆಗೆ ಹರಿಯುತ್ತಿತ್ತು. ಚಾಪಾತ್ರೆಯಿಂದ ಮೇಲೇರುವ ಹಬೆಯಂತೆ ನೀರಿನಿಂದ ಆವಿ ಮೇಲೇರುತ್ತಿತ್ತು. ಆದರೆ ಚುಕ್ಕ [illegible] ತಾಗಿಸಿ ನೋಡಿದಾಗ ನೀರು ಮಂಜುಗಡ್ಡೆಯಂತೆ ತಣ್ಣಗಿತ್ತು.

ಆ ಬಳಿಕ ಅವರು [illegible]. ಆ ದೊಡ್ಡ ಒಲೆಯನು ಉರಿಸುವುದು ಹೇಗೆ [illegible] ಸರಿಯಾಗಿ ತಿಳಿದಿರಲಿಲ್ಲ. ತ[illegible]ಂಬ ಹೊತ್ತಿನ ವರೆಗೆ [illegible] ಹಿಡಿದುಕೊಳ್ಳಲಿಲ್ಲ. ಕೊನೆಗೆ ಉರಿಯಲಾರಂಭಿಸಿದಾಗ [illegible] ಜ್ವಾಲೆಗಳು ಅತಿ ತೀವ್ರವಾಗಿ ಧಗಧಗಿಸುತ್ತಿದ್ದುವು. ಇ[illegible]ಯಲ್ಲಿದ್ದ ಕಿಟಿಕಿಯ ಮೇಲೆ ದಪ್ಪಕ್ಕೆ ಬಿದ್ದಿದ್ದ ಮಂಜು ಆಗ[illegible] ಕರಗಿತು. ಈಗ ಅದರ ಎಡೆಯಿಂದ ಕಾಡಿನ ಅಂಚೂ ಮರ[illegible] ರೆಂಬೆಗಳಲ್ಲಿ ಓಡಾಡುತ್ತಿದ್ದ ಗಿಳಿಗಳೂ ಬಂಡೆಗಳಿಂದ ತುಂಬಿದ [illegible] ಶಿಖರಗಳೂ ಕಾಣಸಿಕ್ಕಿದುವು.

ಕೋಳಿಯ ರೆಕ್ಕೆ[illegible] ಸಜ್ಜುಗೊಳಿಸಲು ಅಮ್ಮನಿಗೆ ಗೊತ್ತಿದ್ದರೂ ಈ ಮುನ ಆಕೆ [illegible]ಲಿದು ಎಂದೂ ಸಜ್ಜುಗೊಳಿಸಿದ್ದಿಲ್ಲ. ಆಕೆ



ಇದಕ್ಕಾಗಿ ತೆಗೆದುಕೊಂಡ ಕಾಲಾವಧಿಯಲ್ಲಿ ಒಂದು ದನವನ್ನೋ ಎತ್ತನ್ನೋ ನಿರಾಯಾಸವಾಗಿ ಚರ್ಮ ಸುಲಿದು ಸಜ್ಜುಗೊಳಿಸಬಹುದಾಗಿತ್ತು.

ಈ ಕೆಲಸವನು ಗೆಕ್ಕ ಸ್ವಲ್ಪವೂ ಇಷ್ಟಪಡಲಿಲ್ಲ. ಆದರೆ ಚುಕ್ಕ ಸಂತೋಷದಿಂದಲೇ ಅಮ್ಮನಿಗೆ ಸಹಾಯಮಾಡಿದ. ಅದಕ್ಕಾಗಿ ಅವನಿಗೆ ಮೊಲದ ಬಾಲ ಅಮ್ಮನಿಂದ ಉಡುಗೊರೆಯಾಗಿ ಸಿಕ್ಕಿತು. ರೋಮದಿಂದ ಪೂರ್ತಿ ಮುಚ್ಚಿದ್ದ ಆ ಬಾಲ ಏನೂ ಭಾರವಿರಲಿಲ್ಲ. ಅವನು ಒಲೆಯ ಮೇಲಿನ ತಟ್ಟಿನಿಂದ ಅದನು ಕೆಳಗೆ ಎಸೆದಾಗ ಅದು ಒಂದು ಪ್ಯಾರಾಚೂಟ್‌ನ ಹಾಗೆ ಗಾಳಿಯಲ್ಲಿ ತೇಲಿತು.

ಊಟವಾದ ಮೇಲೆ ಮೂವರೂ ನಡೆಯಲು ಹೊರಟರು.

ಕೋವಿಯನಾಗಲಿ, ಏನಿಲ್ಲವಾದರೂ ಕೆಲವು ಮದ್ದು ಗುಂಡುಗಳನಾದರೂ ತೆಗೆಕೊಳ್ಳಬೇಕೆಂದು ಚುಕ್ಕ್ ಅಮ್ಮನನು ಒತ್ತಾಯಿಸಿದ. ಆದರೆ ಅಮ್ಮ ಅದಕ್ಕೊಪ್ಪಲಿಲ್ಲ.

[illegible]

[illegible]

[illegible]

[illegible]

ಬದಲಾಗಿ ಆಕೆ ಆ ಕೋವಿಯನು ಅತಿ ಮೇಲಿನ ಕೊಳಿಕೆಯಲ್ಲಿ ತೂಗುಹಾಕಿದಳು. ಆ ಬಳಿಕ ಸ್ಟೂಲೊಂದರ ಮೇಲೆ ಹತ್ತಿ ನಿಂತು ಮದ್ದುಗುಂಡುಗಳನೆಲ್ಲ ಅತ್ಯಂತ ಮೇಲಿನ ತಟ್ಟಿನಲ್ಲಿಟ್ಟಳು. ಅದರಿಂದ ಒಂದೇ ಒಂದನೇನಾದರೂ ತೆಗೆದರೆ ಒಂದು ದಿನ ಕೂಡ ಸುಮ್ಮನೆ ಬಿಡುವುದಿಲ್ಲ ಎಂದು ಚುಕ್ಕನಿಗೆ ಹೇಳಿದಳು.

ಚುಕ್ಕನ ಮುಖ ಕೆಂಪಡರಿತು. ಅವನು ಕೂಡಲೇ ಜಾಗ ಖಾಲಿಮಾಡಿದ. ಒಂದು ಮದ್ದುಗುಂಡು ಅವನ ಜೇಬಿನಲ್ಲಿತ್ತು.

ಅದೊಂದು ಅಸಾಮಾನ್ಯ ನಡೆಯುವಿಕೆಯಾಗಿತ್ತು. ತೊರೆಗೆ ಒಯ್ಯುವ ಒಂದಡಿ ಅಗಲದ ದಾರಿಯಲ್ಲಿ ಅವರು ಸಾಲಾಗಿ ಸಾಗಿದರು. ಮೇಲೆ ಆಗಸವು ತಂಪನೀಯುತ್ತ ನೀಲಿ ಬಣ್ಣದಲ್ಲಿ ಕಂಗೊಳಿಸಿತು. ಮೇಲಕ್ಕೆ ಉಬ್ಬಿ ನಿಂತ ನೀಲಮಲೆಯ ಶಿಖರಗಳು ಸ್ತಂಭಗಳ ಮತ್ತು ಸ್ತೂಪ ಗೋಪುರಗಳ ಪ್ರತೀತಿಯನು ಉಂಟುಮಾಡಿದುವು. ಜಿಜ್ಞಾಸುಗಳಾದ ಗಿಳಿಗಳ ಚಿಲಿಪಿಲಿಯು ಆ ಹೆಪ್ಪುಗಟ್ಟಿಸುವ ಮೌನವನು ಭಂಗಗೊಳಿಸುತ್ತಿತ್ತು. ಅತಿ ವೇಗವಾಗಿ ಸರಿದಾಡುವ ಬೂದುಬಣ್ಣದ ಅಳಿಲುಗಳು ದೇವದಾರುಗಳ ದೊಡ್ಡ ರೆಂಬೆಗಳೆಡೆಯಿಂದ ಓಡಾಡುತ್ತ ಕುಣಿದುವು. ಮರಗಳ ಬುಡದಲ್ಲಿ ಮಂಜಿನ ಮಾರ್ದವ ತುಂಬಿದ ಬಿಳಿಯ ನೆಲಹಾಸಿನಲ್ಲಿ ವಿಚಿತ್ರ ಪ್ರಾಣಿ ಪಕ್ಷಿಗಳ ಹೆಜ್ಜೆಗುರುತುಗಳು ಅಸಾಧಾರಣ ರೂಪಗಳನು ನೆಯ್ದು ಉಟ್ಟುಕೊಂಡಿದ್ದುವು.

ಫಕ್ಕನೆ ತೈಗಾದಲ್ಲಿ ಒಂದು ನರಳಾಟವೂ ಸ್ಫೋಟವೂ ಕೇಳಿಬಂತು. ಬಹುಶಃ ಗಟ್ಟಿಗೊಂಡು ಸಿಕ್ಕಿಕೊಂಡಿದ್ದ ದೊಡ್ಡದೊಂದು ಮಂಜುಗಡ್ಡೆ ಒಂದು ಮರದ ತುದಿಯಿಂದ ಕೊಂಬೆಗಳನು ಮುರಿಯುತ್ತ ಕೆಳಗೆ ಬಿದ್ದಿರಬೇಕು.

ಹಿಂದೆ, ಮಾಸ್ಕೋದಲ್ಲಿದ್ದಾಗ, ಗೆಕ್ಕಗೆ ಅನಿಸುತ್ತಿತ್ತು – ಮಾಸ್ಕೋ, ಅದರ ಬೀದಿಗಳು, ಮನೆಗಳು, ಟ್ರಾಮುಗಳು, ಬಸ್ಸುಗಳು ಎಲ್ಲವೂ ಸೇರಿದರೆ ಈ ವಿಶ್ವವಾಯಿತು ಎಂದು.

ಈಗ ಅವನಿಗೆ ತೋರಿತು, ಲೋಕವೆಂದರೆ ಕಪ್ಪಾಗಿ ಕತ್ತಲು ಕವಿದ ಒಂದು ದೊಡ್ಡ ವನ ಎಂದು. ಅದು ಗೆಕ್ಕನ ಸ್ವಭಾವ. ಅವನ ಮೇಲೆ ಬಿಸಿಲು ಬಿದ್ದರೆ, ಲೋಕದಲ್ಲೆಲ್ಲ ಆಕಾಶದಿಂದ ಮೋಡಗಳೂ ಮಳೆಯೂ ಇಲ್ಲವಾದುವು ಎಂಬುವುದು ಅವನಿಗೆ ಖಾತ್ರಿ.

ಅವನಿಗೆ ಸಂತೋಷವಾದಾಗ ಲೋಕದಲ್ಲಿರುವ ಉಳಿದೆಲ್ಲರೂ ಸಂತುಷ್ಟರಾಗಿರುತ್ತಾರೆಂದು ಅವನು ಭಾವಿಸುತ್ತಿದ್ದ.

ಎರಡು ದಿನಗಳು ಕಳೆದುವು. ಮೂರನೆಯ ದಿವಸ ಬಂತು. ಆದರೂ ಕಾಡಿನಿಂದ ಕಾವಲುಗಾರ ಬಂದುದು ಕಾಣಲಿಲ್ಲ. ಮಂಜಿನಿಂದ ಮುಚ್ಚಿದ ಆ ಪುಟ್ಟ ಗುಡಿಸಲಲ್ಲಿ ಗಾಬರಿ ಆವರಿಸಿತು.

ಅವರಿಗೆ ಸಂಜೆ ಮತ್ತು ರಾತ್ರಿಗಳಲ್ಲಿ ಹೆಚ್ಚು ಭಯವಾಗುತ್ತಿತ್ತು. ಅವರು ಕೋಣೆಯ ಮತ್ತು ವರಾಂಡದ ಬಾಗಿಲುಗಳನು ಭದ್ರಪಡಿಸಿ ಬೆಳಕನು ನೋಡಿ ಮೃಗಗಳು ಮನೆಗೆ ಬಾರದಂತೆ ಚಾಪೆಗಳನು ತೂಗುಹಾಕಿ ಕಿಟಿಕಿಗಳನು ಮುಚ್ಚಿಬಿಟ್ಟರು. ನಿಜವಾಗಿಯೂ ಅವರು ಮಾಡಬೇಕಾದುದು ಇದಕ್ಕೆ ವ್ಯತಿರಿಕ್ತವಾಗಿತ್ತು. ಯಾಕೆಂದರೆ ಮೃಗಗಳೆಂದರೆ ಮನುಷ್ಯರಲ್ಲವಲ್ಲ. ಅವುಗಳಿಗೆ





ಬೆಳಕಿಕೆಂದರೆ ಭಯ. ಹೊಗೆ ಕೊಳವೆಗಳಲ್ಲಿ ಗಾಳಿನುಗ್ಗಿ ಸೀಟಿ ಹೊಡೆಯುತ್ತಿತ್ತು. ಹೊರಗಿನ ಬಿರುಗಾಳಿಯ ರಭಸಕ್ಕೆ ಚೂಪಾದ ಚಿಕ್ಕ ಚಿಕ್ಕ ಹಿಮಚೂರುಗಳು, ಗೋಡೆಗಳು ಗಾಜು ಕಿಟಿಕಿಗಳು ಮುಂತಾದೆಡೆ ಜೋರಾಗಿ ರಾಚಿದಾಗ ಯಾರೋ ಒತ್ತಿ ಕೆರೆಯುತ್ತಲೂ ಪರಚುತ್ತಲೂ ಇದ್ದಾರೆಂದು ಒಳಗಿದ್ದವರಿಗೆ ತೋರಿತು.

ಅವರು ಒಲೆಯ ಮೇಲಿನ ತಟ್ಟಿನ ಮೇಲೆ ಹತ್ತಿದರು. ಅಮ್ಮ ಅವರಿಗೆ ಹಲವಾರು ಕಥೆಗಳನು ಹೇಳಿದಳು. ಕೊನೆಗೆ ಅಮ್ಮನಿಗೆ ನಿದ್ದೆ ಬಂದುಬಿಟ್ಟಿತು.

"ಚುಕ್ಕಾ", ಗೆಕ್ಕನೆಂದ. "ಮಂತ್ರವಾದಿಗಳು ಯಕ್ಷಿಕಥೆಗಳಲ್ಲಿ ಮಾತ್ರ ಬರುವುದು ಯಾಕೆ ? ನಿಜವಾಗಿಯೂ ಮಂತ್ರವಾದಿಗಳು ಇರುವುದಾದರೆ ಗಮ್ಮತಿರುತ್ತಿತ್ತು, ಅಲ್ಲವೇ ?"

"ಮಾಟಗಾರ್ತಿಯರೂ, ಪಿಶಾಚಿಗಳೂ [illegible] ?"

ಗೆಕ್ಕ್ ಅಸೂಯೆಗೊಳ್ಳುತ್ತ [illegible].

"ಪಿಶಾಚಿಗಳು ಯಾರಿಗೆ ಬೇಕು ? [illegible] ಆಗದು. ಆದರೆ ನಮಗೊಬ್ಬ ಮಂತ್ರವಾದಿಯ [illegible] ಸಾಧ್ಯವಿದ್ದಿದ್ದರೆ ಅಪ್ಪನ ಹತ್ತಿರಕ್ಕೆ ಹಾರಿಹೋಗಿ [illegible] ತಿಳಿಸಲು ಅವನಲ್ಲಿ ಎಂದೋ ಹೇಳಬಹುದಾಗಿತ್ತು."

"ಆದರೆ ಅವನು ಯಾಕೆ [illegible] ?"

"ಯಾಕೆ ಹಾರಿ ಹೋಗ[illegible] ? [illegible] ಸುಮ್ಮನೆ ಕೈ ಬೀಸುತ್ತಾನೆ. ಅಥವಾ ಹಾಗೇನಾದರೂ [illegible] ಯಾವುದೋ ಮಾರ್ಗ ಕಂಡುಕೊಳ್ಳುತ್ತಾನೆ. ಅದಕ್ಕಾಗಿ [illegible]."

"ಆತ ಕೈಬೀಸಿ ಹೋಗ[illegible] ಚಳಿ" ಚುಕ್ಕ ಹೇಳಿದ. "ನನನು ನೋಡು. [illegible] ಯಾಕಿಕೊಂಡಿದ್ದೆ. ಆದರೂ ಕಟ್ಟಿಗೆ ತಂದಾಗ [illegible] ಮರಗಟ್ಟಿಹೋದುವು."





"ಅದು ಹಾಗಿರಲಿ, ಚುಕ್ಕ. ನಿಜವಾಗಿಯೂ ತುಂಬ ಗಮ್ಮತಿರುತ್ತಿತ್ತು, ಅಲ್ಲವೇ ?"

ಚುಕ್ಕ ಸ್ವಲ್ಪ ಬೇಸರದಿಂದ ಹೇಳಿದ. "ನನಗೇನು ಗೊತ್ತು ?"

"ನಮ್ಮ ನೆರೆಯಲ್ಲಿನ ಕೆಳ ಅಂತಸ್ತು ಮನೆಯಲ್ಲಿ, ಈಗ ಮಿಷ್ಕರಿಕೋವ್ ವಾಸವಾಗಿರುವಲ್ಲಿ ಹಿಂದೆ ಒಬ್ಬಾತ ಕುಂಟ ವಾಸವಾಗಿದ್ದ, ನೆನಪಿದೆಯೇ ? ಆತ ತಿಂಡಿ ಮಾರಿ ಬದುಕುತ್ತಿದ್ದ. ಹಲವು ರೀತಿಯ ಮುದುಕಿಯರು ಬಂದು ಅವನನು ಕಂಡು ಅವರ ಅದೃಷ್ಟ ಹೇಳಿಸಿಕೊಳ್ಳುತ್ತಿದ್ದರು. ಯಾರಿಗೆ ಅದೃಷ್ಟ ಒಲಿದೀತು, ಯಾರಿಗೆ ಒಲಿಯದು ಇತ್ಯಾದಿ."

"ಹಾಗಂತ ಆತ ಹೇಳಿದ್ದು ಸರಿಯಾಗುತ್ತಿತ್ತೇ ?"

"ಏನೋ ಗೊತ್ತಿಲ್ಲ. ಭಯೋತ್ಪಾದಕರು ಬಂದು ಆತನನು ಹಿಡಿದುಕೊಂಡು ಹೋದರು ಎಂದು ಮಾತ್ರ ನನಗೆ ಗೊತ್ತು. ಆತನಿದ್ದ ಜಾಗದಲ್ಲಿ ಕಳವು ಹೋದ ವಸ್ತುಗಳು ಹಲವು ಅವರಿಗೆ ಸಿಕ್ಕಿದುವು."

"ಹಾಗಾದರೆ ಅವನೊಬ್ಬ ಮಂತ್ರವಾದಿಯೇ ಅಲ್ಲ ಎಂಬುದು ಇದರಿಂದ ಗೊತ್ತಾಗುತ್ತದೆ. ಆತ ಒಬ್ಬ ಬರೇ ಡೋಂಗಿ ಮನುಷ್ಯನಾಗಿದ್ದ. ಏನು ಹೇಳುತ್ತಿ ?"

"ಡೋಂಗಿ ಮನುಷ್ಯನಾಗಿದ್ದುದಂತೂ ನಿಜವೇ" ಚುಕ್ಕ ಸಹಮತಿ ಪ್ರಕಟಿಸಿದ.

"ಆದರೆ ನಾನು ಹೇಳುವುದು ಇದು – ಎಲ್ಲ ಮಂತ್ರವಾದಿಗಳೂ ಡೋಂಗಿ ಮನುಷ್ಯರು. ಒಂದು ತೂತಿನೊಳಗೆ ನುಗ್ಗಿದರೆ ಬೇಕಾದ್ದೆಲ್ಲ ಸಿಗುವುದಾದರೆ ಅಂಥವರು ಮತ್ತೆ ಯಾವುದಾದರೂ ಕೆಲಸ ಮಾಡುತ್ತಾರೆಯೇ? ಇರಲಿ, ನೀನು ಮಲಕ್ಕೊ ಗೆಕ್ಕ್. ನಾನು ನಿನಲ್ಲಿ ಹೆಚ್ಚು ಮಾತನಾಡುವುದಿಲ್ಲ."

"ಅದ್ಯಾಕೆ ?"



“ನೀನು ಒಂದಷ್ಟು ಅಸಂಬಂಧಗಳನು ತಂದಿಕ್ಕುತ್ತಿ, ಅದಕ್ಕೆ. ಆಮೇಲೆ ರಾತ್ರೆ ಹೊತ್ತು ನೀನು ಕೆಟ್ಟ ಕನಸು ಕಂಡು, ಮತ್ತೆ ಮೊಣಕೈ ಮತ್ತು ಮೊಣಕಾಲುಗಳಿಂದ ನನಗೆ ತಿವಿಯುತ್ತಿ. ನಿನೆ ರಾತ್ರೆ ನೀನು ನನ ಹೊಟ್ಟೆಗೆ ತಿವಿದದ್ದು ನನಗೆ ತುಂಬ ಸಂತಸಕೊಟ್ಟಿತು ಎಂದು ತಿಳಿದಿದ್ದಿಯಾ ? ನೋಡುತ್ತಿರು, ಅದನು ನಿನಗೆ ನಾನು ತೋರಿಸಿಕೊಡುತ್ತೇನೆ.”

***

ನಾಲ್ಕನೇ ದಿನ ಬೆಳಗ್ಗೆ ಅಮ್ಮನೇ ಸೌದೆ ಒಡೆಯಬೇಕಾಯಿತು. ಮೊಲವನು ಅವರು ಎಂದೋ ತಿಂದು ಮುಗಿಸಿದ್ದರು. ಅದರ ಎಲುಬಿನಲ್ಲಿನ ತರಿಕಣಗಳನೆಲ್ಲ ಹಕ್ಕಿಗಳು ತಿಂದಿದ್ದುವು. ಎಣ್ಣೆ ಮತ್ತು ನೀರುಳ್ಳಿ ಸೇರಿಸಿ ಮಧ್ಯಾಹಗಳಲ್ಲೆಲ್ಲ ಅ ವರು ಗಂಜಿ ಉಣ್ಣುತ್ತಿದ್ದರು. ಅವರಲ್ಲಿದ್ದ ರೊಟ್ಟಿ ಹೆಚ್ಚು ಕಮ್ಮಿ ಮುಗಿಯುತ್ತ ಬಂದಿತ್ತು. ಆಗ ಅಮ್ಮ ಒಂದಷ್ಟು ಹಿಟ್ಟು ಕಂಡುಕೊಂಡು ದೋಸೆ ಮಾಡಿದಳು.

ಆ ಆಹಾರದ ಬಳಿಕ ಗೆಕ್ಕನಿಗೆ ಏನೂ ಉತ್ಸಾಹ ಉಂಟಾಗಲಿಲ್ಲ. ಅವನಿಗೆ ಜ್ವರವೇನಾದರೂ ಬಂದಿರಬಹುದೆಂದು ಅವಳು ಹೆದರಿದ್ದಳು.

ಮನೆಯಲ್ಲೆ ಉಳಿಯುವಂತೆ ಗೆಕ್ಕನಿಗೆ ಅಮ್ಮ ಹೇಳಿದಳು. ಬಳಿಕ ಚುಕ್ಕನಿಗೆ

[illegible]

* * *

[illegible]

[illegible]

ಬಟ್ಟೆ ಹಾಕಿಸಿದಳು. ನೀರು ತಂದುಕೊಡುವುದಕ್ಕೂ ಮರುದಿನ ಬೆಳಗ್ಗೆ ಒಲೆ ಉರಿಸುವುದಕ್ಕೂ ಸೌದೆ ಪುಳ್ಳಿಗಳನು ಆಯುವುದಕ್ಕೂ ಅವರಿಬ್ಬರೂ ಪಾತ್ರೆಗಳು ಮತ್ತು ಪುಟ್ಟದೊಂದು ಕೈಗಾಡಿಯ ಸಮೇತ ಹೊರಟರು.

ಗೆಕ್ ಒಬ್ಬಂಟಿಯಾದ. ಅವನು ತುಂಬ ಹೊತ್ತು ಕಾದುಕುಳಿತ. ಆಮೇಲೆ ಅವನು ಅಸ್ವಸ್ಥನಾದ. ಆಮೇಲೆ...

***

ಚುಕ್ಕ ಮತ್ತು ಅಮ್ಮ ಹೋಗಿ ಸ್ವಲ್ಪ ಹೊತ್ತಾಯಿತು. ಅವರು ಹಿಂತಿರುಗಿ ಬರುವಾಗ ನೀರ ಪಾತ್ರೆಗಳ ಸಮೇತ ಪುಟ್ಟ ಕೈಗಾಡಿ ಮಗುಚಿಬಿತ್ತು. ಹಾಗಾಗಿ ಅವರು ಪುನಃ ಅಬ್ಬಿಯ ಬಳಿಗೆ ಹೋಗಬೇಕಾಗಿಬಂತು. ಅರ್ಧದಾರಿ ಬಂದಾಗಷ್ಟೆ ಚುಕ್ಕ ತನ ಕೈಗವಸುಗಳಲ್ಲಿ ಒಂದನು ಕಾಡಿನ ಅಂಚಿನಲ್ಲಿ ಕಳೆದುಬಂದಿರುವುದು ತಿಳಿದದ್ದು. ಅವರು ಪುನಃ ಹಿಂತಿರುಗಿ ಹೋದರು. ಈ ಮಧ್ಯೆ ಹೊತ್ತು ಕತ್ತಲಾಯಿತು.

ಕೊನೆಗೆ ಮನೆಗೆ ಮರಳಿ ಬಂದು ತಲುಪಿದಾಗ ಗೆಕ್ ಅಲ್ಲೆಲ್ಲೂ ಕಾಣಲಿಲ್ಲ. ಅವರು ಮೊದಲು ತಿಳಿದುಕೊಂಡುದು ಅವನು ಒಲೆಯ ತಟ್ಟಿನಲ್ಲಿ ಅಡಕಲು ಏರಿಸಿ ಆಡಿನ ಚರ್ಮಗಳ ಕೆಳಗೆಲ್ಲೋ ಅಡಗಿಕೊಂಡಿದ್ದಾನೆಂದು. ಆದರೆ ಅವನು ಅಲ್ಲಿ ಇರಲಿಲ್ಲ.

ಚುಕ್ ಕೌಶಲದಿಂದ ಮುಗುಳಗುತ್ತಾ ಅಮ್ಮನ ಕಿವಿಯಲ್ಲಿ ಹೇಳಿದ : ಗೆಕ್ ಖಂಡಿತವಾಗಿಯೂ ಒಲೆಯ ಕೆಳಗಡೆ ಇದ್ದಾನೆಂದು.

ಅದನು ಕೇಳಿ ಅಮ್ಮ ತುಂಬ ಸಿಟ್ಟುಗೊಂಡಳು. ಕೂಡಲೇ ಇಳಿದು ಬರುವಂತೆ ಗೆಕ್ಕನಿಗೆ ಹೇಳಿದಳು. ಆದರೆ, ಗೆಕ್ಕನ ಸದ್ದುಸುದ್ದಿಯಿಲ್ಲ.

ಆಗ ಚುಕ್ ಒಲೆಯನು ಒಕ್ಕಿನೋಡಲು ಆಗತ್ಯವಾದ ನೀಳವಾದ ಸರಳನು ತೆಗೆದುಕೊಂಡು ಒಲೆಯ ಅಡಿಗೆ ಚುಚ್ಚಿ ನೋಡಿದ. ಇಲ್ಲ, ಗೆಕ್ ಅಲ್ಲಿ ಇರಲಿಲ್ಲ.

ಆಗ ಅಮ್ಮ ನಿಜವಾಗಿಯೂ ಗಾಬರಿಯಾದಳು. ಬಾಗಿಲ ಬಳಿಯಿದ್ದ ಮೊಳೆಯನು ಆಕೆ ಗಮನಿಸಿ ನೋಡಿದಳು. ಗೆಕ್ಕನ ಕೋಟು ಮತ್ತು ಟೊಪ್ಪಿಗಳು ಅಲ್ಲಿ ಇರಲಿಲ್ಲ.

ಅವಳು ಹೊರಗೆ ಇಳಿದು ಮನೆಯ ಸುತ್ತಲೂ ನೋಡಿದಳು. ಹಿಂತಿರುಗಿ ಬಂದು ದೀಪ ಉರಿಸಿದಳು. ಕತ್ತಲು ತುಂಬಿದ್ದ ಸೌದೆಕೊಟ್ಟಿಗೆಯಲ್ಲೂ ಸೂಕ್ಷ್ಮವಾಗಿ ನೋಡಿದಳು.

ಆಕೆ ಗೆಕ್ಕನನು ಕರೆದಳು. ಬೈದು ನೋಡಿದಳು. ಆದರೆ ಯಾವ ಉತ ್ತರವೂ ಇಲ್ಲ. ಈ ಮಧ್ಯೆ ಕತ್ತಲು ಹೆಚ್ಚುತ್ತ ಸಾಗಿ ಮಂಜಿನ ರಾಶಿಗಳನು ತುಂಬ ವೇಗವಾಗಿ ಮುಚ್ಚುತ್ತಿತ್ತು.

ಅಮ್ಮ ಪುನಃ ಮನೆಯೊಳಗೆ ಓಡಿ ಹೊಕ್ಕಳು. ಮೊಳೆಯಿಂದ ಕೋವಿಯನು ಎಳೆದುಕೊಂಡು ಒಂದಷ್ಟು ಮದ್ದುಗುಂಡುಗಳನೂ ದೀಪವನೂ ತ ೆಗೆದುಕೊಂಡು, ಮನೆಯಿಂದ ಹೊರಗೆ ಹೋಗಬೇಡವೆಂದು ಚುಕ್ಕನಿಗೆ ಕಟ್ಟುನಿಟ್ಟಾಗಿ ಆಜ್ಞಾಪಿಸಿ ಹೊರಗೆ ಓಡಿದಳು.

ಕಳೆದ ನಾಲ್ಕು ದಿನಗಳಲ್ಲಿ ಮಂಜಿನಲ್ಲಿ ಅನೇಕ ಹೆಜ್ಜೆಗಳು ಮೂಡಿದ್ದುವು.

ಹುಡುಕಾಟ ಎಲ್ಲಿಂದ ಆರಂಭಿಸಬೇಕೆಂದು ಅವಳಿಗೆ ನಿಶ್ಚಯವಿರಲಿಲ್ಲ. ಆದರೂ ಗೆಕ್ಕ್ ಒಂಟಿಯಾಗಿ ಕಾಡಿಗೆ ಹೋಗಲು ಧೈರ್ಯವಹಿಸಲಾರನೆಂದು ತರ್ಕಿಸಿ ಆಕೆ ರಸ್ತೆಯಲ್ಲೆ ಹೋಗಲು ತೀರ್ಮಾನಿಸಿದಳು.

ರಸ್ತೆಯಲ್ಲಿ ಒಂದೇ ಒಂದು ಜೀವಜಂತುಗಳಿರಲಿಲ್ಲ. ಆಕೆ ಕೋವಿಗೆ ಮದ್ದುಗುಂಡು ತುಂಬಿಸಿ ಗುಂಡು ಹಾರಿಸಿದಳು. ಕಿವಿಗಳನು ಕೊಂಡೆಕಟ್ಟಿ ಆಕೆ ಎರಡನೆಯ ಮೂರನೆಯ ಸಲವೂ ಗುಂಡು ಹಾರಿಸಿದಳು.

ಕೂಡಲೇ ಬಹಳ ಹತ್ತಿರದಿಂದಲೇ ಉತ್ತರರೂಪವಾಗಿ ಒಂದು ಗುಂಡಿನ ಸದ್ದು ಕೇಳಿಬಂತು. ರಕ್ಷಣೆಗಾಗಿ ಯಾರೋ ಓಡಿಬರುತ್ತಿದ್ದರು. ಅಮ್ಮ ಮುಂದಕ್ಕೆ ಓಡಲು ತೊಡಗುವಷ್ಟರಲ್ಲಿ ಅವಳ ಮೆಟ್ಟು ಮಂಜಿನಲ್ಲಿ ಹೂತುಕೊಂಡಿತು.

ಅವಳ ಕೈಯಿಂದ ದೀಪ ಕೆಳಗೆ ಬಿದ್ದುದಲ್ಲದೆ ಅದರ ಗಾಜು ಒಡೆದು ಅದು ನಂದಿಹೋಯಿತು.

ಫಕ್ಕನೆ ಕಾವಲುಗಾರನ ಗುಡಿಸಲ ವರಾಂಡದಿಂದ ಕಿವಿಗಡಚಿಕ್ಕುವ ಒಂದು ಬೊಬ್ಬೆ ಕೇಳಿಸಿತು. ಅದು ಚುಕ್ಕನದು. ಗುಂಡಿನ ಸದ್ದು ಫಕ್ಕನೆ ಕೇಳಿದಾಗ – ಗೆಕ್ಕನನು ತಿಂದು ಹಾಕಿದ ಸೀಳುನಾಯಿಗಳು ಅಮ್ಮನ ಮೇಲೆ ಆಕ್ರಮಣ ಮಾಡುತ್ತಿವೆ ಎಂದು ಅವನು ಭಾವಿಸಿದ್ದ.

ದೀಪವನು ಎಸೆದ ಅಮ್ಮ ಏದುಸಿರು ಬಿಡುತ್ತ ಮನೆಗೆ ಓಡಿದಳು. ಕೋಟು ಹಾಕದೆ ನಿಂತಿದ್ದ ಚುಕ್ಕನನು ಆಕೆ ಮನೆಯೊಳಗೆ ದೂಡಿ ಹತ್ತಿಸಿದಳು. ಕೋವಿಯನು ಒಂದು ಮೂಲೆಗೆ ಎಸೆದಳು. ಐಸಿನಂತೆ ತಂಪಾಗಿದ್ದ ನೀರನು ಮೂರು ನಾಲ್ಕು ಗುಟುಕು ಕುಡಿದಳು.

ಹೊರಗೆ ಮೆಟ್ಟಿಲುಗಳ ಬಳಿ ಯಾರೋ ಬಲವಾಗಿ ಒದೆಯುವ ಸದ್ದು ಕೇಳಿಬಂತು. ಬಾಗಿಲು ಬಲವಂತವಾಗಿ ತೆರೆಯಲ್ಪಟ್ಟಿತು. ನೀರಾವಿಯಲ್ಲಿ ಮುಚ್ಚಿಕೊಂಡಂತಿದ್ದ ನಾಯಿಯೂ ಹಿಂದಿನಿಂದ ಕಾವಲುಗಾರನೂ ಮನೆಯೊಳಗೆ ನುಗ್ಗಿ ಬಂದರು.

"ಏನಾಯ್ತು ? ಗುಂಡು ಹಾರಿಸಿದ್ದು ಯಾಕೆ?" ಶಿಷ್ಟಾಚಾರವೇನೂ ಇಲ್ಲದೇ, ಕೋಟನೂ ಕಳಚದೇ ಆತ ಕೇಳಿದ.

"ನನ ಮಗ, ಕಾಣಿಸುತ್ತಿಲ್ಲ." ಅಮ್ಮನ ಕಪೋಲಗಳಿಂದ ಕಣ್ಣೀರಿಳಿಯಿತು. ಬೇರೇನನೂ ಹೇಳಲು ಅವಳಿಂದಾಗಲಿಲ್ಲ. "ಅಳುವುದನು ಒಂದು ನಿಮಿಷ ನಿಲ್ಲಿಸಿ," ಕಾವಲುಗಾರ ಒರಟಾಗಿ ಹೇಳಿದ. "ಯಾವಾಗಿಂದ ಕಾಣಿಸುತ್ತಿಲ್ಲ ? ತುಂಬಾ ಹೊತ್ತಾಯಿತೇ ? ಅಥವಾ ಈಗಿಂದಷ್ಟೆಯೋ ? ಹೋಗು ವೀರ!" ಆತ ನಾಯಿಗೆ ಆಜ್ಞಾಪಿಸಿದ. ಅಮ್ಮನತ್ತ ತಿರುಗಿ ಆತ ಪುನಃ ಹೇಳಿದ : "ಹೇಳಿ, ಇಲ್ಲವಾದರೆ ನಾನು ಹೊರಟುಹೋಗುತ್ತೇನೆ!"



"ಒಂದು ತಾಸು ಹಿಂದೆ," ಅಮ್ಮ ಹೇಳಿದಳು. "ನಾವು ನೀರು ತರುವುದಕ್ಕೆ ಹೋದೆವು. ಹಿಂತಿರುಗಿ ಬಂದಾಗ ಅವನಿಲ್ಲ. ಕೋಟನೂ ಟೊಪ್ಪಿಯನೂ ಧರಿಸಿ ಅವನು ಹೋಗಿಬಿಟ್ಟಿದ್ದಾನೆ."

"ಅವನು ಒಂದು ತಾಸಿನಲ್ಲಿ ಬಹಳ ದೂರವೇನೂ ಹೋಗಿರಲಾರ. ಉಣ್ಣೆಯ ಚಪ್ಪಲಿ ಧರಿಸಿದ್ದರೆ ಅಷ್ಟು ಬೇಗ ಶೈತ್ಯದಿಂದ ಮರಕಟ್ಟಲೂ ಸಾಧ್ಯವಿಲ್ಲ. ವೀರಾ, ಇಲ್ಲಿ ಬಾ. ಇದನೊಮ್ಮೆ ಮೂಸು."

ಗೆಕ್ಕನ ಒಂದು ಟೊಪ್ಪಿಯನು ಕೊಕ್ಕೆಯಿಂದ ತೆಗೆದು ಅದನೂ ಅವನ ರಬ್ಬರ್ ಚಪ್ಪಲಿಯನೂ ಆತ ನಾಯಿಯ ಮೂಗಿನ ಬಳಿ ಹಿಡಿದ.



ಆ ವಸ್ತುಗಳನು ನಾಯಿ ಬಹಳ ಶ್ರದ್ಧೆಯಿಂದ ಮೂಸಿ ಬುದ್ಧಿಪೂರ್ಣವಾದ ತನ ಕಣ್ಣುಗಳನು ಯಜಮಾನನ ಮುಖದತ್ತ ಎತ್ತಿ ನೋಡಿತು.

"ಇನು ಹೋಗು," ಬಾಗಿಲು ತೆರೆದುಕೊಟ್ಟು ಕಾವಲುಗಾರ ಹೇಳಿದ. "ಹೋಗು, ವೀರಾ. ಹೋಗಿ ಅವನನು ಹುಡುಕಿ ಹಿಡಿ."

ಆದರೆ ನಾಯಿ ಬಾಲವಾಡಿಸುತ್ತ ಅಲ್ಲೇ ನಿಂತುಕೊಂಡಿತು.

"ಹೋಗು!" ಕಾವಲುಗಾರ ಒರಟಾಗಿಯೇ ಹೇಳಿದ. "ಹುಡುಕಿ ಹಿಡಿ ವೀರಾ, ಹುಡುಕಿ ಹಿಡಿ." ನಾಯಿ ಅಸ್ವಸ್ಥವಾಗಿ ಗಾಳಿಯಲ್ಲಿ ವಾಸನೆ ಹಿಡಿದು ನೆಲವನು ಉಗುರಿನಿಂದ ಕೆರೆಯಿತು. ಆದರೆ ಅಲ್ಲಿಂದ ಕದಲಲಿಲ್ಲ.

"ನೀನು ಹೀಗೆ ಆಟವಾಡುತ್ತ ನಿಲ್ಲುವುದ್ಯಾಕೆ ?" ಕಾವಲುಗಾರ ಕೋಪದಿಂದ ಕೇಳಿದ. ಇನೊಮ್ಮೆ ಟೊಪ್ಪಿಯನೂ ರಬ್ಬರ್ ಚಪ್ಪಲಿಯನೂ ನಾಯಿಯ ಮುಖದ ಬಳಿ ತೋರಿಸಿ ಅದರ ಕೊರಳಪಟ್ಟಿ ಹಿಡಿದುಕೊಂಡ. ಆದರೆ ವೀರ ಕಾವಲುಗಾರನನು ಹಿಂಬಾಲಿಸಲಿಲ್ಲ. ಅದು ಮತ್ತೆ ಮತ್ತೆ ಸುತ್ತು ತಿರುಗಿ ಕೊನೆಗೆ ನೇರವಾಗಿ ಇದಿರು ದಿಕ್ಕಿಗೆ ನಡೆಯಿತು.

ಒಂದು ದೊಡ್ಡ ಮರದ ಪೆಟ್ಟಿಗೆಯ ಬಳಿ ಹೋಗಿ ನಿಂತು ಅದು ತನ ರೋಮಮಯ ಕಾಲಿನಿಂದ ಒಲೆಯನು ಕೆರೆಯಿತು. ಬಳಿಕ ಯಜಮಾನನ ನೇರಕ್ಕೆ ತಿರುಗಿ ಆಲಸ್ಯಭಾವದಿಂದ ದೀರ್ಘವಾಗಿ ಬೊಗಳಿತು.

ಆಶ್ಚರ್ಯಚಕಿತಳಾಗಿ ನಿಂತಿದ್ದ ಅಮ್ಮನ ಕೈಗೆ ಕೋವಿಯನು ಕೊಟ್ಟು ಕಾವಲುಗಾರ ಪೆಟ್ಟಿಗೆಯ ಬಳಿಹೋಗಿ ಅದರ ಮುಚ್ಚಳ ತೆಗೆದ.

ಅದರಲ್ಲಿ, ಆಡಿನ ತೊಗಲುಗಳನೂ ಗೋಣಿಚೀಲಗಳನೂ ರಾಶಿ ಹಾಕಿದ್ದರ ಮೇಲೆ ಗೆಕ್ಕ್ ಸುಖವಾಗಿ ಮಲಗಿ ನಿದ್ರಿಸುತ್ತಿದ್ದ. ಕೋಟನು ಹೊದ್ದುಕೊಂಡಿದ್ದ. ತಲೆಯನು ಟೊಪ್ಪಿಯ ಮೇಲೆ ಇಟ್ಟಿದ್ದ.

ಅವನನು ಮೇಲಕ್ಕೆ ಎತ್ತಿ ಎಬ್ಬಿಸಿ ಎಚ್ಚರಗೊಳಿಸಿದಾಗ ಅವನು ನಿದ್ದೆ ಇನೂ ಬಿಟ್ಟಿರದ ಕಣ್ಣುಗಳನು ತೆರೆದು ನೋಡಿದ. ತನ ವಿಷಯದಲ್ಲಿ ಇಷ್ಟೊಂದು



ಗಡಿಬಿಡಿ ಮಾಡಿಕೊಳ್ಳುವುದು ಯಾಕೆಂದು ಅವನಿಗೆ ಅರ್ಥವಾಗಲಿಲ್ಲ. ಅಮ್ಮ ಅವನಿಗೆ ಮುತ್ತಿಕ್ಕುವುದು, ಅಳುವುದು ಮುಂತಾದ್ದನು ಮಾಡುತ್ತಿದ್ದಳು. ಚುಕ್ಕ ಅವನ ಕೈಗಳನೂ ಕಾಲುಗಳನೂ ಹಿಡಿದೆಳೆಯುವುದು, ಅತ್ತಿತ್ತ ಓಡುತ್ತ ಕುಣಿಯುತ್ತ ನಡೆಯುವುದು ಮಾಡುತ್ತಿದ್ದ.

"ಹುರ್ರಾ! ಹುರ್ರಾ!" ಅವನು ಕೂಗಾಡಿದ. ರೋಮ ಮುಚ್ಚಿದ್ದ ವೀರನ ಮೂಗಿಗೆ ಚುಕ್ಕ್ ಒಂದು ಮುತ್ತು ಕೊಟ್ಟಾಗ ಅದು ನಾಚಿಕೊಂಡು ಮುಖ ತಿರುಗಿಸಿತು. ಈ ಗಡಿಬಿಡಿ ಗದ್ದಲಗಳೆಲ್ಲ ಯಾಕೆಂದು ಅದಕ್ಕೂ ಗೊತ್ತಾಗಲಿಲ್ಲ. ಮೆಲ್ಲಗೆ ಬಾಲವಲ್ಲಾಡಿಸುತ್ತ ಅದು ಮೇಜಿನ ಮೇಲಿದ್ದ ಒಂದು ರೊಟ್ಟಿ ತುಂಡನು ಆಸೆಯಿಂದ ನೋಡಿತು.



ಅಮ್ಮನೂ ಚುಕ್ಕನೂ ನೀರಿಗೆ ಹೋದಾಗ ಒಂಟಿಯಾಗಿ ಕುಳಿತು ಬೇಸರಗೊಂಡ ಗೆಕ್ಕ್ ಅವರನು ಗೋಳುಹೊಯ್ದುಕೊಳ್ಳಲು ನಿರ್ಧರಿಸಿದ. ಟೊಪ್ಪಿಯನೂ ಕೋಟನೂ ತೆಗೆದು ಪೆಟ್ಟಿಗೆಯೊಳಗೆ ಹತ್ತಿ ಕುಳಿತ. ಅವರು ಹಿಂತಿರುಗಿ ಬಂದು ತನನು ಹುಡುಕುವವರೆಗೆ ಕಾಯುವುದು, ಬಳಿಕ ಪೆಟ್ಟಿಗೆಯೊಳಗೆ ಸದ್ದುಂಟುಮಾಡಿ ಅವರನು ಹೆದರಿಸುವುದು, ಇವು ಅವನ ಯೋಜನೆ.

ಆದರೆ, ಅವರು ಮರಳಿ ಬರಲು ತುಂಬ ಸಮಯ ತೆಗೆದುಕೊಂಡುದರಿಂದ ಅವನು ಅವರನು ಕಾದು ಕಾದು ತನಗೇ ಗೊತ್ತಾಗದೆ ಮಲಗಿ ನಿದ್ರಿಸಿಬಿಟ್ಟಿದ್ದ.

ಒಮ್ಮೆಲೆ ಕಾವಲುಗಾರ ಎದ್ದು ಒಂದು ಭಾರವಾದ ಕೀಲಿಕೈಯನೂ ಸುಕ್ಕುಗಟ್ಟಿದ ನೀಲಿ ಲಕೋಟೆಯನೂ ಮೇಜಿನ ಮೇಲಿಟ್ಟ.

"ತಗೊಳ್ಳಿ, ಇದು ನಿಮಗೆ" ಅವನೆಂದ.

"ನಮ್ಮ ಮುಖ್ಯಸ್ಥ ಸೊರೋಗ್‌ರ ಕೋಣೆಯ ಮತ್ತು ತಿಜೋರಿಯ ಕೀಲಿಕೈ ಇದು. ಇದು ಅವರದೊಂದು ಪತ್ರ. ಅವರು ಉಳಿದ ಜನರೊಂದಿಗೆ ನಾಲ್ಕು ದಿನಗಳೊಳಗೆ ಬರುತ್ತಾರೆ. ಹೊಸ ವರ್ಷ ಪ್ರಾರಂಭದ ಹಿಂದಿನ ದಿನ."

ಹಾಗಿದ್ದರೆ, ಮುಖ ಊದಿಸಿಕೊಂಡು ಒರಟು ಭಾವದಿಂದ ವರ್ತಿಸುವ ಈ ಮುದುಕ ಹೋದುದಾದರೂ ಎಲ್ಲಿಗೆ ? ಉರುಳು ನೋಡುವುದಕ್ಕೆಂದು ಹೇಳಿ ಹೊರಟುಹೋಗಿ ಆತ ಅಷ್ಟು ದೂರದಲ್ಲಿರುವ ಅಲ್ಕರಾಷ್ ಮಲೆಯ ಕಣಿವೆಯ ತನಕದ ದೂರವನೆಲ್ಲ ಜಾರುಹಲಗೆಯಲ್ಲೆ ಸಂಚರಿಸಿದ್ದ.

ಪತ್ರವನು ಒಡೆದು ನೋಡದೇನೇ ಅಮ್ಮ ಮೇಲೆದ್ದು ಆ ಮುದುಕನ ಹೆಗಲಲ್ಲಿ ಕೃತಜ್ಞತಾಪೂರ್ವಕವಾಗಿ ಕೈ ಇರಿಸಿದಳು.

ಆದರೆ ಆತ ಪೆಟ್ಟಿಗೆಯೊಳಗಿದ್ದ ಬೇಟೆಯ ಸಾಮಗ್ರಿಗಳ ಕಟ್ಟನು ಮಗುಚಿಹಾಕಿದ್ದಕ್ಕೆ ಗೆಕ್ಕನ ಕುರಿತಾಗಿಯೂ ದೀಪ ಒಡೆದುದಕ್ಕೆ ಅಮ್ಮನ ಕುರಿತಾಗಿಯೂ ಪಿರಿಪಿರಿ ಮಾಡಿದ, ಅಷ್ಟೆ. ತುಂಬ ಹೊತ್ತು ಆತ ನಿರಂತರವಾಗಿ

ಪಿರಿಪಿರಿ ಹೇಳುತ್ತಿದ್ದ. ಆದರೆ ಮುಖ ಕಪ್ಪುಮಾಡಿಕೊಂಡು [illegible] ಆ ಮುದುಕನ ಕುರಿತು ಈಗ ಅವರಿಗೂ ಭಯವಾಗುತ್ತಿರಲಿಲ್ಲ.

ಅಂದಿನ ರಾತ್ರಿ ಪೂರ್ತಿ ಅಮ್ಮ ಗೆಕ್ಕನನು ಕಣ್ಣ ಮುಂದಿನಿಂದ ತಪ್ಪಿಸಿ ಹೋಗಲು ಬಿಡಲಿಲ್ಲ. ಸಣ್ಣದೊಂದು ಸದ್ದಾದರೂ ಆಕೆ ಅವನ ಕೈಯನು ಬಿಗಿಯಾಗಿ ಹಿಡಿಯುತ್ತಿದ್ದಳು. ಅವನು ಫಕ್ಕನೆ ಓಡಿ ಮರೆಯಾದಾನು ಎಂದು ಹೆದರಿಕೊಂಡ ಹಾಗೆ. ಆಕೆ ಅವನನು ತುಂಬ ಮುದ್ದು ಮಾಡುವುದನು ಕಂಡು ಕೊನೆಗೆ ಚುಕ್ಕನಿಗೆ ಅಸೂಯೆಯುಂಟಾಯಿತು. ಆ ಪೆಟ್ಟಿಗೆಯೊಳಗೆ ಹೋಗಿ ಕುಳಿತುಕೊಳ್ಳಲು ತನಗೆ ಹೊಳೆಯಲಿಲ್ಲವಲ್ಲ ಎಂದು ಅವನು ಮರುಗಿದ.

***

ನಿಜವಾದ ಮಜಾ ಆರಂಭವಾದ್ದು ಈಗ. ಮರುದಿನ ಬೆಳಗ್ಗೆ ಕಾವಲುಗಾರ ಅಪ್ಪನ ಕೋಣೆ ತೆರೆದು, ಒಲೆಯನು ಚೆನಾಗಿ ಉರಿಸಿದ್ದಲ್ಲದೆ ಅಪ್ಪನ ವಸ್ತುಗಳನು ಅಲ್ಲಿಗೆ ಒಯ್ದಿರಿಸಿದ. ಆ ಕೋಣೆ ಸಾಕಷ್ಟು ದೊಡ್ಡದಿದ್ದು ಧಾರಾಳ ಬೆಳಕು ಬೀಳುತ್ತಿತ್ತು. ಆದರೆ ಅಲ್ಲಿನ ಎಲ್ಲವೂ ಅಸ್ತವ್ಯಸ್ತವಾಗಿ ಬಿದ್ದಿದ್ದುವು.

ಅಮ್ಮ ತಡವಿಲ್ಲದೆ ಕೋಣೆಯನು ಒಪ್ಪ ಮಾಡಲಾರಂಭಿಸಿದಳು. ಅ ಂದು ಹಗಲೆಲ್ಲ ಅವಳು ವಸ್ತುಗಳನು ಓರಣವಾಗಿರಿಸುವುದು, ಧೂಳು ಝಾಡಿಸುವುದು, ಒರೆಸುವುದು, ತೊಳೆಯುವುದು ಮುಂತಾದ್ದನು ಮಾಡಿದಳು.

ಸಂಜೆಯಾದಾಗ ಕಟ್ಟಿಗೆ ಸಮೇತ ಬಂದ ಕಾವಲುಗಾರ ಅಚ್ಚರಿಯಿಂದ ಬಾಗಿಲ ಚೌಕಟ್ಟಲ್ಲಿ ನಿಂತುಬಿಟ್ಟ. ಒಳಗೆ ಕಾಲಿಡಲು ಹಿಂದೇಟು ಹಾಕಿದ. ಆ ಕೋಣೆ ಅಷ್ಟು ಲಕಲಕಿಸುತ್ತಿತ್ತು.

ಆದರೆ, ವೀರ ನೇರವಾಗಿ ಒಳಗೆ ದಾಟಿಹೋಯಿತು. ಅದು ಆಗಷ್ಟೆ ಶುಚಿಗೊಳಿಸಿದ್ದ ನೆಲದಲ್ಲಿ ಗೆಕ್ಕನ ಹತ್ತಿರ ಓಡಿಹೋಗಿ ತನ ತೇವಭರಿತ ಮುಸುಡನು ಅವನಿಗೆ ತಿಕ್ಕಿತು.

"ನಿನನು ಹುಡುಕಿ ಹಿಡಿದದ್ದು ನಾನು. ಅದಕ್ಕಾಗಿ ನೀನು ನನಗೆ ಏನಾದರೂ ತಿನಲು ಕೊಡಬೇಕು," ಎಂದು ಅದು ಹೇಳುತ್ತಿರುವಂತೆ ಭಾಸವಾಗುತ್ತಿತ್ತು.

ಅಮ್ಮ ಅದಕ್ಕೆ ಒಂದು ತುಂಡು ಸೋಸೇಜ್ ಎಸೆದು ಕೊಟ್ಟಳು.

ಅದನು ನೋಡಿ ಕಾವಲುಗಾರ ಮುಸುಮುಸು ಹೇಳತೊಡಗಿದ. ನಾಯಿಗಳಿಗೆ ಸೋಸೇಜ್ ಕೊಡುವುದನು ಕಂಡರೆ ತ್ರೈಗಾದಲ್ಲಿ ಹಕ್ಕಿಗಳು ಕೂಡ ನಕ್ಕಾವು ಎಂದು ಆತ ಹೇಳಿದ.

ಅಮ್ಮ ಆತನಿಗೆ ಅದರ ಒಂದು ದೊಡ್ಡ ತುಂಡನು ಕತ್ತರಿಸಿ ಕೊಟ್ಟಳು. ಕೃತಜ್ಞತೆ ಹೇಳುತ್ತಾ ಆತ ಹೊರಗೆ ಹೋದ. ಪೇಟೆಯವರ ವಿಚಿತ್ರವಾದ ರೀತಿಗಳ ಕುರಿತು ಅಚ್ಚರಿಪಡುತ್ತ ನರೆದಲೆಯನು ಅಲುಗುತ್ತ ಆತ ತನಲ್ಲೆ ಏನೇನೋ ಹೇಳುತ್ತಿದ್ದ.

***

ಮರುದಿನ ಹೊಸವರ್ಷದ ಒಂದು ಗಿಡ ನೆಡಲು ಅವರು ತೀರ್ಮಾನಿಸಿದರು.

ಅಲಂಕಾರಕ್ಕಾಗಿ ಅವರು ಸಿಕ್ಕಿದ್ದನೆಲ್ಲ ಬಳಸಿಕೊಂಡರು! ಅಲ್ಲಿ ಅವರ ಕಣ್ಣಿಗೆ ಬಿದ್ದ ಹಳೆಯ ಮಾಸಪತ್ರಿಕೆಗಳಿಂದ ಬಣ್ಣಬಣ್ಣದ ಚಿತ್ರಗಳನು ಕತ್ತರಿಸಿ ತಗೆದರು. ಹಳೆಯ ವಸ್ತ್ರ ಮತ್ತು ಹತ್ತಿಯಿಂದ ಗೊಂಬೆಗಳನೂ ಪ್ರಾಣಿಪಕ್ಷಿಗಳನೂ ಮಾಡಿದರು. ಅಪ್ಪನ ಹೊಗೆಸೊಪ್ಪು ಪೆಟ್ಟಿಗೆಯಲ್ಲಿದ್ದ ಬೇಗಡೆ ಕಾಗದಗಳನೆಲ್ಲ ತೆಗೆದು ಸುಂದರವಾದ ಹೂಗಳನು ಮಾಡಿ ಅಲಂಕರಿಸಿದರು.

ಮುಖ ಊದಿಸಿಕೊಂಡು ಇರುವ ಸ್ವಭಾವದವನಾದರೂ ಕಾವಲುಗಾರ ಸೌದೆ ತಂದು ಹಾಕಿದ ಬಳಿಕ ಅವರ ಕೈಚಳಕವನು ಕಂಡು ಆಶ್ಚರ್ಯದಿಂದ ತುಂಬ ಹೊತ್ತು ಬಾಗಿಲ ಬಳಿ ಬಂದು ನಿಂತುಕೊಂಡ. ಕೊನೆಗೆ ಅವನಿಗೆ ಸುಮ್ಮನಿರಲು ಸಾಧ್ಯಾವಾಗದಂತಾಯಿತು. ಚಹಾಕ್ಕೆ ಮುಚ್ಚಲು ಬಳಸುವ ಒಂದಷ್ಟು ಬೇಗಡೆ ಕಾಗದಗಳನೂ ತನ ಮೆಟ್ಟುಹೊಲಿಯಲು ಉಪಯೋಗಿಸಿದ

ಬಳಿಕ ಬಾಕಿಯಾದ ಒಂದು ದೊಡ್ಡ ಮೇಣದ ತುಂಡನ್ನೂ ಅವಳು ಅವನಿಗೆ ತಂದುಕೊಟ್ಟು.

ಎಂಥ ಮಜ! ಅಲಂಕಾರಸಾಲೆ ಕೂಡಲೆ ಮೇಣಸಾಲೆಯಾಯಿತು. ಅವರು ತಯಾರಿಸಿದ ಮೊಂಬತ್ತಿಗಳಿಗೆ ಒಳ್ಳೆಯ ರೂಪವಾಗಲಿ ಆಕಾರವಾಗಲಿ ಇರಲಿಲ್ಲ. ಆದರೂ ಪೇಟೆಯಲ್ಲಿ ಸಿಗಬಹುದಾದ ಅತ್ಯಂತ ಚೆನಾದ ಮೊಂಬತ್ತಿಗಳ ಹಾಗೆಯೇ ಒಳ್ಳೆ ಪ್ರಭೆಯಿಂದಲೇ ಇವೂ ಉರಿದುವು.

ಇನು ಒಂದು ಫರ್ ಮರದ ಕೊರತೆ ಮಾತ್ರ ಇದ್ದುದು. ಅಮ್ಮ ಕಾವಲುಗಾರನಲ್ಲಿ ಕೊಡಲಿ ಕೇಳಿದಳು. ಆತ ಉತ್ತರವನೇನೂ ಕೊಡಲಿಲ್ಲ. ಎದ್ದು ನಿಂತು ಜಾರುಹಲಗೆಗಳನು ಧರಿಸಿ ಕಾಡಿಗೆ ಹೊರಟುಹೋದ.

ಅರ್ಧ ತಾಸಿನೊಳಗೆ ಆತ ಮರಳಿ ಬಂದ.

ನೀವು ಏನು ಬೇಕಾದರೂ ಅಂದುಕೊಳ್ಳಿ. ಅಲಂಕಾರಗಳಿಗೆ ಅಂದ ಸಾಲದೆಂದೋ ಮೊಲವನು ಕಂಡರೆ ಬೆಕ್ಕಿನಂತಿದೆ ಎಂದೋ ಗೊಂಬೆಗಳಿಗೆಲ್ಲ ಕೋಲಿನಂಥ ಮೂಗುಗಳೂ ಬಿಡುಗಣ್ಣು ನೋಟಗಳೊಂದಿಗೆ ಒಂದೇ ಆಕಾರದಲ್ಲಿವೆಯೆಂದೋ ಬೇಗಡೆ ಕಾಗದದಿಂದ ಆವರಿಸಿದ ತೂಗುದಾರಗಳು ಅಂಗಡಿಗಳಲ್ಲಿ ಕಾಣಸಿಗುವ ಬಣ್ಣದ ಸ್ಫಟಿಕಗೋಳಗಳಂತೆ ಲಕಲಕ ಹೊಳೆಯುತ್ತಿಲ್ಲವೆಂದೋ – ಹೀಗೆಲ್ಲ ಹೇಳಬಹುದು. ಆದರೆ ಆ ಫರ್‌ಮರದಂಥದನು ಮಾಸ್ಕೋದಲ್ಲೆಲ್ಲೂ ನೀವು ಕಾಣಲಾರಿರಿ! ಶಿಖರಗಳ ತುದಿಗೆ ಪುಟ್ಟ ಹಸಿರು ನಕ್ಷತ್ರಗಳಿಂದ ಕೂಡಿ ತೈಗಾದ ಆ ಸುಭಗಸಂತತಿ ಗಾಂಭೀರ್ಯದಿಂದ ತಲೆಯೆತ್ತಿ ನಿಂತಿತು.

***

ನಾಲ್ಕು ದಿನ ಹೋದದ್ದೇ ಗೊತ್ತಾಗಲಿಲ್ಲ. ಕೊನೆಗೂ ಹೊಸವರ್ಷದ ಹಿಂದಿನ ದಿನ ಬಂತು. ಬೆಳ್ಳಂಬೆಳಗ್ಗಿಂದ ಚುಕ್ಕಗೆಕ್ಕರು ಹೊರಗಿದ್ದರು. ಏನು ಹೇಳಿದರೂ

ಅವರು ಒಳಗೆ ಬರಲಿಲ್ಲ. ಅವರ ಮೂಗು ನೀಲಿ ಬಣ್ಣವಾಯಿತು. ಆದರೂ ಅಪ್ಪನೂ ಜತೆಗಾರರೂ ಯಾವುದೇ ಗಳಿಗೆಯಲ್ಲಿ ಬಂದಾರೆಂಬ ನಿರೀಕ್ಷೆಯಿಂದ ಅವರು ಗಟ್ಟಿಗೊಂಡ ಮಂಜಿನಲ್ಲಿ ಸುತ್ತಾಡಿದರು. ಅವರು ಮಧ್ಯಾಹ ಊಟದ ಹೊತ್ತಿಗಿಂತ ಮೊದಲು ತಲಪುವುದಿಲ್ಲವೆಂದೂ ಆದುದರಿಂದ ಹೊರಗೆ ಸುತ್ತಾಡುತ್ತ ಚಳಿಯಿಂದ ಮರಗಟ್ಟುವುದರಿಂದ ಉಪಯೋಗವಿಲ್ಲವೆಂದೂ ಬಚ್ಚಲುಕೊಟ್ಟಿಗೆಯಲ್ಲಿ ನೀರು ಬಿಸಿಮಾಡುತ್ತಿದ್ದ ಕಾವಲುಗಾರ ಹೇಳಿದ.

ನಡೆದದ್ದೂ ಹಾಗೆಯೇ. ಅವರು ಊಟ ಮಾಡಲು ಕುಳಿತಿದ್ದರಷ್ಟೆ. ಆಗ ಕಾವಲುಗಾರ ಕಿಟಿಕಿಗೆ ಬಡಿದ. ಕೋಟುಗಳನು ತೆಗೆದು ಅವನು ತಬ್ಬಿ ಹಿಡಿದುಕೊಳ್ಳುತ್ತ ಮೂವರೂ ವರಾಂಡಕ್ಕೆ ಓಡಿದರು.

"ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿರಿ", ಕಾವಲುಗಾರನೆಂದ. "ಕೆಲವೇ ನಿಮಿಷಗಳಲ್ಲಿ ಆ ತೋರುವ ದೊಡ್ಡ ಮಲೆಯ ಬಲಭಾಗದ ಇಳಿಜಾರಲ್ಲಿ ಅ



[illegible]

[illegible]

[illegible]

ವರು ಕಾಣಸಿಕ್ಕಾರು. ಅರ್ಧ ತಾಸಿನಲ್ಲಿ ಮನೆಗೆ ಬಂದುಬಿಡುತ್ತಾರೆ."

ಹಾಗೆಯೇ ನಡೆಯಿತು. ಮಲೆಯ ಇಳಿಜಾರಿನಲ್ಲಿ ಮೊದಲು ಕಂಡದ್ದು ಸಾಮಾನು ಸರಂಜಾಮು ಹೇರಿದ ಕೆಲವು ಹಿಮಗಾಡಿಗಳನು ಎಳೆದುಕೊಂಡು ಬರುತ್ತಿದ್ದ ನಾಯಿಗಳು. ಅವುಗಳ ಹಿಂದೆ ಜಾರು ಹಲಗೆಗಳಲ್ಲಿ ತುಂಬ ವೇಗವಾಗಿ ಚಲಿಸುವ ಒಂದು ಗುಂಪು ಜನ.

ಆ ದೊಡ್ಡ ಮಲೆಗಳ ಹಿನೆಲೆಯಲ್ಲಿ ಅವರು ತುಂಬ ಚಿಕ್ಕವರಾಗಿ ಮಾತ್ರ ಕಂಡುಬಂದರು. ಆದರೂ ಬಿಳಿಯ ಮಂಜುಗಡ್ಡೆಗಳ ಮುಂದೆ ಅವರ ತಲೆ ಮತ್ತು ಕೈಕಾಲುಗಳು ಸ್ಪಷ್ಟವಾಗಿ ಕಾಣುತ್ತಿದ್ದುವು.

ಮರಗಳಿಲ್ಲದ ಇಳಿಜಾರುಗಳಲ್ಲಿ ಅವರು ವೇಗವಾಗಿ ಇಳಿಯುತ್ತ ಕಾಡಿನೊಳಗೆ ಮರೆಯಾದರು.

ಸರಿಯಾಗಿ ಅರ್ಧಗಂಟೆ ಕಳೆದಾಗ ನಾಯಿಗಳ ಬೊಗಳಾಟವೂ ಜನರ ಗದ್ದಲವೂ ಹಿಮಗಾಡಿಗಳ ಕರಕರ ಸದ್ದೂ ತುಂಬ ಸಮೀಪದಿಂದ ಕೇಳಿಬಂದುವು.

ಹಸಿವಿನಿಂದ ಕಂಗಾಲಾದ ನಾಯಿಗಳು ಮನೆ ಹತ್ತಿರವಾಯಿತೆಂದು ತಿಳಿದುಕೊಂಡು ಕಾಡಿನೊಳಗಿಂದ ಓಟಕಿತ್ತವು. ಅವುಗಳ ಹಿಂದಿನಿಂದ ಜಾರುಹಲಗೆಗಳಲ್ಲಿ ಸಂಚರಿಸುತ್ತಿದ್ದ ಒಂಬತ್ತು ಜನರಿದ್ದರು.

ಅಮ್ಮ, ಚುಕ್ಕ, ಗೆಕ್ಕರು ವರಾಂಡದಲ್ಲಿ ನಿಂತಿದ್ದುದು ನೋಡಿ ಅವರು ಕೋಲುಗಳನು ಬೀಸಿದ್ದಲ್ಲದೆ ಗಟ್ಟಿದನಿಯಲ್ಲಿ ಕೂಗಿಕೊಂಡರು.

ಗೆಕ್ಕನಿಗೆ ಇನಷ್ಟು ಹೊತ್ತು ಕಾದು ನಿಲ್ಲುವ ತಾಳೆ ಇರಲಿಲ್ಲ. ಅವನು ಮೆಟ್ಟಲುಗಳನು ನೆಗೆನೆಗೆದು ಇಳಿದ. ಅವನು ಉಣ್ಣೆಯ ಚಪ್ಪಲಿಗಳನು ಮಂಜಿನಲ್ಲಿ ಹುಗಿಸುತ್ತ ಗುಂಪಿನ ಮುಂದೆ ಉಳಿದೆಲ್ಲರಿಗಿಂತ ಜೋರಾಗಿ ಕೂಗಿಕೊಳ್ಳುತ್ತ ಬರುತ್ತಿದ್ದ ಹೆಚ್ಚು ಎತ್ತರದ ಗಡ್ಡದಾತನ ಬಳಿಗೆ ಓಡಿದ.

***

ಮಧ್ಯಾಹ್ನದ ಬಳಿಕ ಅವರು ಸ್ನಾನಮಾಡಿ ಮುಖ ತೊಳೆದುಕೊಂಡು ಮೈಶುಚಿಗೊಳಿಸಿಕೊಂಡರು.

ರಾತ್ರೆ ಅವರೆಲ್ಲ ಆಹ್ಲಾದದಿಂದ ಹೊಸ ವರ್ಷವನು ಬರಮಾಡಿಕೊಳ್ಳಲು ಒಟ್ಟಾದರು.

ಮೇಜನು ಸಿದ್ಧಪಡಿಸಲಾಗಿತ್ತು. ದೀಪವಾರಿಸಿ ಮೊಂಬತ್ತಿಗಳನು ಉರಿಸಲಾಗಿತ್ತು. ಆದರೆ, ಚುಕ್ಕಗೆಕ್ಕರನುಳಿದು ಉಳಿದೆಲ್ಲರೂ ಪ್ರೌಢರಾದುದರಿಂದ ಮುಂದೆ ಮಾಡಬೇಕಾದುದೇನು ಎಂಬುದು ಅವರಿಗೆ ನಿಶ್ಚಯವಿರಲಿಲ್ಲ.

ಅದೃಷ್ಟವಶಾತ್ ಒಬ್ಬನ ಕೈಯಲ್ಲಿ ಒಂದು ಅಕೋರ್ಡಿಯನ್ ಇತ್ತು. ಆತ ಅದನು ತೆಗೆದು ಚಟುಲಗತಿಯ ಒಂದು ನೃತ್ತರಾಗವನು ನುಡಿಸಿದ. ಎಲ್ಲರೂ ಬಹಳ ಸೊಗಸಾಗಿ ನೃತ್ತ ಮಾಡಿದರು. ವಿಶೇಷವಾಗಿ ಅಮ್ಮನ ಜತೆ.





ಆದರೆ ಅಪ್ಪನಿಗೆ ನೃತ್ತಮಾಡಲು ಬರುತ್ತಿರಲಿಲ್ಲ. ದೊಡ್ಡಗಾತ್ರದ ದೇಹವೂ ಸಾತ್ವಿಕತೆಯೂ ಇದ್ದ ಅಪ್ಪ ನೃತ್ತಮಾಡುವ ಅಗತ್ಯವಿಲ್ಲ, ನೆಲದುದ್ದಕ್ಕೂ ಒಮ್ಮೆ ನಡೆದಾಡಿದರೆ ಸಾಕು, ಕಪಾಟಿನೊಳಗಿರುವ ಸ್ಫಟಿಕ ಪಾತ್ರೆಗಳು ಕಿಣಿಕಿಣಿಯೆಂದಾವು.

ಆತ ಚುಕ್ಕ ಗೆಕ್ಕರನು ಮಡಿಲಲ್ಲಿ ಕುಳಿತುಕೊಳ್ಳಿಸಿದ. ಅವರೆಲ್ಲ ಚಪ್ಪಾಳೆ ತಟ್ಟಿದರು.

ಹೆಚ್ಚು ವಿಳಂಬವಿಲ್ಲದೆ ನೃತ್ತ ಕೊನೆಗೊಂಡಿತು. ಗೆಕ್ಕ್ ಒಂದು ಹಾಡು ಹಾಡಬೇಕೆಂದು ಅವರೆಲ್ಲ ಹೇಳಿದರು.





ಅವನನು ಒತ್ತಾಯಮಾಡುವ ಅಗತ್ಯ ಬೀಳಲಿಲ್ಲ. ತನಗೆ ಹಾಡಲು ಗೊತ್ತಿದೆ ಎಂದು ಅವನಿಗೆ ಅನಿಪಿತ್ತು. ಆ ವಿಚಾರವಾಗಿ ಅವನು ಹೆಮ್ಮೆಪಟ್ಟುಕೊಂಡ.

ಅಕೋರ್ಡಿಯನ್ ನುಡಿಸುವವನು ಅವನ ಹಾಡಿನ ಜತೆ ಶ್ರುತಿ ಹಿಡಿದ. ಅವನು ಹಾಡಿದುದೇನೆಂದು ನಾನು ಈಗ ನೆನಪಿಸಿಕೊಳ್ಳಲಾರೆ. ಆದರೆ ಅದು ಒಂದು ಒಳ್ಳೆಯ ಹಾಡಾಗಿತ್ತು ಎಂಬುದು ನನಗೆ ನೆನಪಿದೆ. ಯಾಕೆಂದರೆ ಅವನು ಹಾಡುತ್ತಿದ್ದಾಗ ಎಲ್ಲರೂ ಸುಮ್ಮನಿದ್ದರು. ಅವನು ಉಸಿರು ತೆಗೆದುಕೊಳ್ಳಲು ಮಧ್ಯೆ ಹಾಡು ನಿಲ್ಲಿಸಿದಾಗ ಮೊಂಬತ್ತಿಗಳು ಚಿರುಗುಟ್ಟುವುದನೂ ಹೊರಗೆ ಗಾಳಿ ಶಿಳ್ಳೆ ಹೊಡೆಯುತ್ತಿದ್ದುದನೂ ಕೇಳಬಹುದಾಗಿತ್ತು.

ಅವನು ಹಾಡು ನಿಲ್ಲಿಸಿದಾಗ ಎಲ್ಲರೂ ಚಪ್ಪಾಳೆ ತಟ್ಟಲು ಮತ್ತು ಬೊಬ್ಬಿಡಲು ತೊಡಗಿದರು. ಅವರು ಗೆಕ್ಕನನು ಹಿಡಿದರು. ಮೇಲಕ್ಕೆ ಹಾರಿಸಬೇಕೆಂದು ಅವರು ಬಯಸಿದ್ದರು. ಆದರೆ ಕೂಡಲೆ ಅಮ್ಮ ಅವನನು ಅವರ ಹಿಡಿತದಿಂದ ತಪ್ಪಿಸಿದಳು. ಆವೇಶಗೊಂಡು ಅವನನು ಎತ್ತಿ ಮೇಲೆ ಹಾರಿಸಿದರೆ ಮರದಿಂದ ಮಾಡಿದ ಛಾವಣಿಗೆ ತಾಗೀತು ಎಂಬುದು ಆಕೆಯ ಭಯವಾಗಿತ್ತು.

"ಎಲ್ಲರೂ ಕುಳಿತುಕೊಳ್ಳಿ" ವಾಚು ನೋಡುತ್ತ ಅಪ್ಪ ಹೇಳಿದ. "ಕಾರ್ಯಕ್ರಮದ ಮುಖ್ಯಭಾಗ ಪ್ರಾರಂಭಿಸುವವರಿದ್ದೇವೆ." ಆತ ರೇಡಿಯೋ ಚಾಲು ಮಾಡಿಟ್ಟ.

ಅವರೆಲ್ಲ ಸದ್ದು ಮಾಡದೆ ಕಾದುಕುಳಿತರು.

ಆರಂಭದಲ್ಲಿ ಯಾವುದೇ ಸದ್ದು ಇರಲಿಲ್ಲ. ಬಳಿಕ ಒಂದು ಸದ್ದು ಕೇಳಿಸಿತು. ಜತೆಗೆ ಮೋಟಾರ್ ಕಾರುಗಳು ಹಾರ್ನ್ ಹೊಡೆಯುವ ಸದ್ದು ಕೂಡ. ಅದರ ಬಳಿಕ ಒಂದು ತೆರದ ಪರಪರ ಸದ್ದು ಮತ್ತು ಶಿಳ್ಳೆಯ ಸದ್ದು ಕೇಳಿಸಿತು. ದೂರದಿಂದ ಗಂಟೆಗಳ ಇಂಪಾದೊಂದು ಸದ್ದು ಮೊಳಗಿತು.

ದೊಡ್ಡದೂ ಚಿಕ್ಕವೂ ಆದ ಗಂಟೆಗಳು ಜತೆಯಾಗಿ ಶಬ್ದಿಸಿದುವು : ಣಂಜ್ ಣಂಜ್ !

ಚುಕ್ಕ ಗೆಕ್ಕರು ಪರಸ್ಪರ ನೋಡಿದರು. ಕೇಳಿದ ಸದ್ದು ಯಾವುದೆಂಬುದು ಅವರಿಗೆ ಚೆನಾಗಿ ಗೊತ್ತಿತ್ತು. ದೂರದ ಮಾಸ್ಕೋದಲ್ಲಿನ ಸ್ಪಾಕಿ ಗೋಪುರದ ಕೆಂಪುನಕ್ಷತ್ರದ ಕೆಳಗೆ ಕ್ರೈಮ್ಲಿನ್‌ನ ಚಿನದ ಗಡಿಯಾರದಿಂದ ಹೊರಟ ಗಂಟೆಗಳ ಸದ್ದಾಗಿತ್ತದು.





ಹೊಸವರ್ಷದ ಉದಯದಲ್ಲಿ ಆ ಗಂಟೆಗಳ ಸದ್ದನು ಜನರು ಎಲ್ಲೆಡೆಯಲ್ಲೂ ಕೇಳಿದರು – ನಗರದಲ್ಲಿ, ಮಲೆಯಲ್ಲಿ, ಹುಲ್ಲುಗಾವಲಿನಲ್ಲಿ, ತೈಗಾದಲ್ಲಿ, ನೀಲಿ ಕಡಲಿನಲ್ಲಿ – ಎಲ್ಲ ಕಡೆಯಲ್ಲೂ;

ಚಿಂತೆಯಲ್ಲಿ ಮುಳುಗಿ, ಮೇಲಧಿಕಾರಿಗಳ ಆಜ್ಞೆಗಾಗಿ ಎಚ್ಚರದಿಂದ ಕಾದುಕುಳಿತ ಕವಚಿತ ವಾಹನದ ಕಮಾಂಡರನೂ ಆ ಗಂಟೆಸದ್ದನು ಕೇಳಿರುತ್ತಾನೆನುವುದು ನಿಸ್ಸಂದೇಹ.

ಎಲ್ಲರೂ ಎದ್ದು ನಿಂತರು. ಪರಸ್ಪರ ಹೊಸವರ್ಷದ ಶುಭಾಶಯ ಹೇಳಿದರು. ಹೊಸವರ್ಷ ತುಂಬ ಸಂತೋಷ ಉಂಟುಮಾಡಲಿ ಎಂದು ಹಾರೈಸಿದರು.

ಸಂತೋಷದ ಅರ್ಥವನು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಅರ್ಥಮಾಡಿಕೊಂಡರು. ಆದರೆ ಮರ್ಯಾದೆಯಿಂದ ಬದುಕುವುದು, ಕಠಿಣವಾಗಿ ಪರಿಶ್ರಮಿಸುವುದು, ಸೋವಿಯಟ್ ಯೂನಿಯನ್ ಎಂಬ ಹೆಸರಲ್ಲಿ ಖ್ಯಾತವಾದ ವಿಸ್ತಾರವೂ ಸಂತುಷ್ಟವೂ ಆದ ರಾಷ್ಟ್ರವನು ಪ್ರೀತಿಸುವುದು, ಆದರಿಸುವುದು – ಇವೆಲ್ಲವನೂ ನಾವು ಮಾಡಬೇಕೆಂದು ಪ್ರತಿಯೊಬ್ಬರಿಗೂ ತಿಳಿದಿತ್ತು, ಪ್ರತಿಯೊಬ್ಬರೂ ಅದನು ಅರ್ಥಮಾಡಿಕೊಂಡಿದ್ದರು.

***





ಚುಕ್ಕ ಗೆಕ್ಕರು

ಅರ್ಕಾಡಿ ಗೈದರ್

